# ಪರಿಚಯ

ಹೊಸ ಒಡಂಬಡಿಕೆಯ ಇಪ್ಪತ್ತೇಳು ಪುಸ್ತಕಗಳಲ್ಲಿ, ಹದಿಮೂರು ಪತ್ರಿಕೆಗಳು ಪೌಲನ ಹೆಸರಿನಲ್ಲಿರುತ್ತವೆ. ಇವುಗಳಲ್ಲಿ ನಾಲ್ಕು ಪತ್ರಿಕೆಗಳು (1 ತಿಮೊಥೆ; 2 ತಿಮೊಥೆ; ತೀತನಿಗೆ; ಮತ್ತು ಫಿಲೆಮೋನನಿಗೆ) ಪ್ರತ್ಯೇಕ ವ್ಯಕ್ತಿಗಳಿಗೆ ಬರೆಯಲ್ಪಟ್ಟವುಗಳಾಗಿವೆ. ಅವುಗಳಲ್ಲಿ ಒಂಭತ್ತು ಪತ್ರಿಕೆಗಳು ಆಗಷ್ಟೆ ಬೆಳೆಯುತ್ತಿದ್ದ ಸಭೆಗಳಿಗೆ ಬರೆಯಲ್ಪಟ್ಟಿದ್ದವು, ಅವುಗಳಲ್ಲಿ ಬಹುಪಾಲು ಸಭೆಗಳು ಪೌಲನ ಸುವಾರ್ತಾ ಪ್ರಯಾಣಗಳ ವೇಳೆಯಲ್ಲಿ ಆತನಿಂದ ಸ್ಥಾಪಿಸಲ್ಪಟ್ಟವುಗಳಾಗಿದ್ದವು. ಈ ಸಭೆಗಳು ಒಳಗೊಂಡಿದ್ದಂಥ ಜನರು ಕ್ರೈಸ್ತರಾಗಿದ್ದರಾದರೂ, ಅವರು ಇತ್ತೀಚೆಗಷ್ಟೆ ತಮ್ಮ ವಿಗ್ರಹಾರಾಧಕ ಧರ್ಮಗಳನ್ನು ಬಿಟ್ಟು ಬಂದವರಾಗಿದ್ದರು. ಆದುದರಿಂದ, ಅವರಿಗೆ ತಮ್ಮ ಪರಿವರ್ತನೆಗೆ ಮುನ್ನ ಸಿಕ್ಕಿದ್ದ ಬೋಧನೆಗಿಂತಲೂ ಅಧಿಕವಾದ ಬೋಧನೆ ಈಗ ಅಗತ್ಯವಾಗಿತ್ತು. ಎಳೆಯ ಸಭೆಗಳಿಗೆ ಬರೆಯುವ ಈ ಪತ್ರಿಕೆಗಳಲ್ಲಿಯೇ, ಪೌಲನು ಪವಿತ್ರಾತ್ಮನಿಂದ ಮಾರ್ಗದರ್ಶಿಸಲ್ಪಟ್ಟವನಾಗಿ (1 ಕೊರಿಂಥ 14:37), ಆ ಆಳವಾದ ಬೋಧನೆಯನ್ನು ಒದಗಿಸುತ್ತಾನೆ.

ಪೌಲನು ಸ್ಥಾಪಿಸಿದ್ದ ಸರಾಸರಿ ಸಭೆಗಳಲ್ಲಿ ಬಹುಶಃ ಥೆಸಲೋನಿಕದವರಿಗೆ ಹೆಚ್ಚಿನ ಬೋಧನೆಯ ಅಗತ್ಯತೆಯು ಅಧಿಕವಾಗಿತ್ತು. ಅಧಿಕವಾಗುತ್ತಿದ್ದ ಕ್ರೈಸ್ತರ ಮುನ್ನಡೆಯನ್ನು ವಿರೋಧಿಸುತ್ತಿದ್ದ ಯೆಹೂದ್ಯರ ಪ್ರಚೋದನೆಯಿಂದಾದ ಹಿಂಸೆಯ ಕಾರಣದಿಂದ, ತಾನು ಉದ್ದೇಶಿಸಿದ್ದಕ್ಕಿಂತಲೂ ಸ್ವಲ್ಪ ಶೀಘ್ರವಾಗಿಯೇ ಆತನು ಆ ಪಟ್ಟಣವನ್ನು ತೊರೆಯಬೇಕಾಗಿ ಬಂದಿತ್ತು (ಅಪೊಸ್ತಲರ ಕೃತ್ಯಗಳು 17:1-10). ಅವರ ಕ್ರೈಸ್ತೀಯ ಪರಿಪಕ್ವತೆಗೆ ಅವಶ್ಯಕವಾದ ಬೋಧನೆಗಳನ್ನು ಒದಗಿಸುವದಕ್ಕಾಗಿ ಆತನು ಥೆಸಲೋನಿಕದವರಿಗೆ ಆ ಎರಡು ಪತ್ರಿಕೆಗಳನ್ನು ಬರೆದನು.

## ಲೇಖಕ

### ಆಂತರಿಕ ಪುರಾವೆ

1 ಥೆಸಲೋನಿಕದವರಿಗೆ ಪತ್ರಿಕೆಯು ಪೌಲನಿಂದ ಬರೆಯಲ್ಪಟ್ಟಿದ್ದೆಂದು ವಾಕ್ಯಭಾಗವು ದೃಢೀಕರಿಸುತ್ತದೆ (1:1; 2:18). ವಾಕ್ಯಭಾಗವು ಬೇರೆ ಕಡೆಗಳಲ್ಲಿರುವ ಪೌಲನ ಪರಿಭಾಷೆಯೊಂದಿಗೆ ಸಾಮ್ಯತೆಯನ್ನು ಹೊಂದಿರುತ್ತದೆ. (ನೋಡಿರಿ, ಉದಾಹರಣೆಗಾಗಿ, 1:2ನ್ನು ರೋಮಾ 1:8 ಹೋಲಿಸಿ ಮತ್ತು 4:1ನ್ನು ಎಫೆಸ 6:10 ಮತ್ತು ಫಿಲಿಪ್ಪಿ 4:8ರೊಂದಿಗೆ ಹೋಲಿಸಿ.)

ನಮಗೆ ಇತರ ಮೂಲಗಳಿಂದ ಸಿಕ್ಕಿರುವ ಪುರಾವೆಗಳೊಂದಿಗೆ ಸೀಲನ ಹೆಸರು

ಸರಿಯಾಗಿ ಹೊಂದಾಣಿಕೆಯಾಗುತ್ತದೆ (ಅಪೊಸ್ತಲರ ಕೃತ್ಯಗಳು 17:4). ಥೆಸಲೋನಿಕದಲ್ಲಿನ ಸಭೆಯನ್ನು ಸ್ಥಾಪಿಸುವದರಲ್ಲಿ ಆತನು ಪೌಲನಿಗೆ ಸಹಾಯವನ್ನು ಮಾಡಿದ್ದನು. ತಿಮೊಥೆಯನ ಬಗ್ಗೆ ಹೇಳಲ್ಪಟ್ಟಿರುವಂಥದ್ದು ಆತನ ಬಗ್ಗೆ ಅಪೊಸ್ತಲರ ಕೃತ್ಯಗಳ ಪುಸ್ತಕ ಹಾಗೂ ಹೊಸ ಒಡಂಬಡಿಕೆಯ ಬೇರೆ ಸ್ಥಳಗಳಲ್ಲಿ ಹೇಳಲ್ಪಟ್ಟಿರುವ ಕಾರ್ಯಗಳೊಂದಿಗೆ ಹೊಂದಾಣಿಕೆಯಾಗುತ್ತದೆ. (1:1ರ ಮೇಲಿನ ಚರ್ಚೆಯನ್ನು ನೋಡಿರಿ.)

### ಬಾಹ್ಯ ಪುರಾವೆ

ಪ್ರೇರಿತವಲ್ಲದ ಮೂಲಗಳಿಂದ ಸಿಕ್ಕುವ ಬಾಹ್ಯ ಪುರಾವೆಯು ಈ ಪುಸ್ತಕವನ್ನು ಬರೆದವನು ಪೌಲನೇ ಎಂಬುದನ್ನು ದೃಢೀಕರಿಸುತ್ತವೆ.

ಉದಾಹರಣೇಗೆ, ರೋಮಾಪುರದ Clementನು ಕ್ರಿ.ಶ. 95ರಲ್ಲಿ ಹೀಗೆ ಬರೆದನು, "ನಾವು ಎಲ್ಲಾದರಲ್ಲಿಯೂ ಆತನಿಗೆ ಕೃತಜ್ಞತಾಸ್ತುತಿ ಮಾಡಬೇಕು."[1] ಇದು 1 ಥೆಸಲೋನಿಕ 5:18ರೊಂದಿಗೆ ಸಾಮ್ಯತೆಯನ್ನು ಹೊಂದಿದೆ. ಅಂತಿಯೋಕ್ಯದ Ignatius ನು, ಕ್ರಿ.ಶ. 110ರಲ್ಲಿ ಹೀಗೆ ಬರೆದನು, "ನೀವು ಸಹ ಎಡೆಬಿಡದೆ ಪ್ರಾರ್ಥನೆ ಮಾಡಿರಿ" ಮತ್ತು ಈ ಬುದ್ಧಿವಾದವು 1 ಥೆಸಲೋನಿಕ 5:17ರಿಂದ ಬಂದಂಥದ್ದು ಎಂಬುದು ಸ್ಪಷ್ಟವಾಗಿದೆ.[2] Marcionನ ಕ್ಯಾನೋನಿನಲ್ಲಿ, ಒಂದು ಕ್ರಿ.ಶ. 140ರ ದಿನಾಂಕ ಹೊಂದಿದ ಪ್ರೇರಿತ ಪುಸ್ತಕಗಳ ಪಟ್ಟಿಯಾಗಿದ್ದು, ಅದರಲ್ಲಿ 1 ಥೆಸಲೋನಿಕದವರಿಗೆ ಬರೆದ ಪತ್ರಿಕೆಯು ಸೇರಿದ್ದು ಅದರ ಕರ್ತೃ ಪೌಲನು ಎಂದು ಹೇಳಲಾಗಿರುತ್ತದೆ. ಕ್ರಿ.ಶ. 170ರಲ್ಲಿ ರಚಿಸಲ್ಪಟ್ಟಿತೆಂದು ಹೇಳಲಾಗುವ Muratorian ಅವಶೇಷದಲ್ಲಿನ ರೋಮನ್ ಕ್ಯಾನೋನಿನ 1 ಥೆಸಲೋನಿಕದವರಿಗೆ ಬರೆದ ಪತ್ರಿಕೆಯನ್ನೊಳಗೊಂಡಿರುತ್ತದೆ. ಕ್ರಿ.ಶ. 180ರಲ್ಲಿ Irenaeusನು ತನ್ನ *Against Heresies*[3] ಕೃತಿಯಲ್ಲಿ ಈ ಪತ್ರಿಕೆಯನ್ನು ಹೆಸರು ಹೇಳಿ ಉಲ್ಲೇಖಿಸಿರುತ್ತಾನೆ.

ಕ್ರಿ.ಶ. 200 ದಿಂದಲೂ, ಅನೇಕರು ಈ 1 ಥೆಸಲೋನಿಕದವರಿಗೆ ಬರೆದ ಪತ್ರಿಕೆಯನ್ನು ಉಲ್ಲೇಖನ ಮಾಡಿದ್ದಾರೆ ಮತ್ತು ಅದರ ಕರ್ತೃ ಪೌಲನು ಎಂದು ಹೇಳಿರುತ್ತಾರೆ. ಹೀಗೆ ಅದು ಪೌಲನ ಪತ್ರಿಕೆಯೆಂಬುದನ್ನು ನಿರಾಕರಿಸಿದವರು ಬಹಳ ಕಡಿಮೆಯಿದ್ದಾರೆ ಮತ್ತು ಆ ಕಾರಣದಿಂದ ಅದು ಪ್ರೇರಿತವಾದದ್ದಾಗಿದೆ.

## ಲೇಖಕನ ಹಿನ್ನಲೆ

### ಆತನ ಜನನ

ಪೌಲನು ಕಿಲಿಕ್ಯದ ತಾರ್ಸ ಪಟ್ಟಣದಲ್ಲಿ ಜನಸಿದವನಾಗಿದ್ದನು (ಅಪೊಸ್ತಲರ ಕೃತ್ಯಗಳು 21:39; 11:25), ಅದೊಂದು ವಾಣಿಜ್ಯದ ನಗರವಾಗಿದ್ದು ಅಲ್ಲಿ ಬಹಳಷ್ಟು ಮಂದಿ ಯೆಹೂದ್ಯರು ವಾಸಿಸುತ್ತಿದ್ದರು. ಆ ಪಟ್ಟಣದಲ್ಲೊಂದು ಖ್ಯಾತಿಯುಳ್ಳ ಗ್ರಂಥಾಲಯವಿತ್ತು, ಅದು ಐಗುಪ್ತ್ಯದ ಅಲೆಗ್ಜಾಂಡ್ರಿಯದಲ್ಲಿ ಗ್ರಂಥಾಲಯಕ್ಕೆ ನಿರಂತರವಾದ ಪೈಪೋಟಿಯನ್ನೊಡ್ಡುತ್ತಿತ್ತು. ಆ ಪಟ್ಟಣದಲ್ಲಿದ್ದ ಪ್ರಸಿದ್ಧ ನಾಗರಿಕರಲ್ಲೊಬ್ಬನೆಂದರೆ Athenodosius, ಈತನು ಚಕ್ರವರ್ತಿಯಾದ Octavian Augustusನಿಗೆ ಮಿತ್ರನಾಗಿದ್ದವನು.

ಪೌಲನ ಜನನವು ಸುಮಾರು ಕ್ರಿ.ಶ. 1-10ರ ಕಾಲಾವಧಿಯ ಮಧ್ಯದಲ್ಲಿ ಆಗಿರುತ್ತದೆ. ಸ್ತೇಫನನನ್ನು ಕಲ್ಲೆಸೆದು ಕೊಲ್ಲುವ ವೇಳೆಯಲ್ಲಿ, ಸುಮಾರು ಕ್ರಿ.ಶ. 34-35ರ ಮಧ್ಯದಲ್ಲಿ, ಆತನನ್ನು ಲೂಕನು ಒಬ್ಬ "ಯೌನಸ್ಥನು" ಎಂದು ಬಣ್ಣಿಸಿರುತ್ತಾನೆ (ಅಪೊಸ್ತಲರ ಕೃತ್ಯಗಳು 7:58). ಫಿಲೆಮೋನನಿಗೆ ಪತ್ರಿಕೆಯು ಬರೆಯಲ್ಪಡುವ ವೇಳೆ, ಸುಮಾರು ಕ್ರಿ.ಶ. 62-63ರ ಹೊತ್ತಿಗೆ, ಆತನು ತನ್ನನ್ನು "ಮುದುಕನು" ಎಂದು ಕರೆದುಕೊಂಡನು (ಫಿಲೆಮೋನನಿಗೆ 9).

## ಆತನ ಕುಟುಂಬ

ಆತನ ಕುಟುಂಬದ ವಿಷಯದಲ್ಲಿ ನೋಡುವದಾದರೆ, ಆತನು ಬೆನ್ಯಾಮೀನನ ಕುಲಕ್ಕೆ ಸೇರಿದ ಒಬ್ಬ ಯೆಹೂದ್ಯನಾಗಿದ್ದನು (ಫಿಲಿಪ್ಪಿ 3:5-8). ಇಬ್ರಿಯ ಭಾಷೆಯಲ್ಲಿ ಆತನು ಸೌಲ ಎಂದು ಕರೆಯಲ್ಪಟ್ಟಿದ್ದನು; ಗ್ರೀಕ್ ಭಾಷೆಯಲ್ಲಿ ಪೌಲ ಎಂದು ಕರೆಯಲ್ಪಡುತ್ತಿದ್ದನು (ಅಪೊಸ್ತಲರ ಕೃತ್ಯಗಳು 13:9). ಆತನ ತಂದೆಯು ಒಬ್ಬ ರೋಮನ್ ಪೌರತ್ವ ಹೊಂದಿದ್ದ ವ್ಯಕ್ತಿಯಾಗಿದ್ದನು (ಅಪೊಸ್ತಲರ ಕೃತ್ಯಗಳು 22:25-29). ಆತನ ಕುಟುಂಬವು ತಕ್ಕಮಟ್ಟಿಗೆ ಶ್ರೀಮಂತವಾಗಿದ್ದಿರಬೇಕು; ಇಲ್ಲವಾದಲ್ಲಿ, ಅವರು ಪೌಲನನ್ನು ವ್ಯಾಸಂಗಕ್ಕಾಗಿ ಯೆರೂಸಲೇಮಿಗೆ ಕಳುಹಿಸಿರುವದಕ್ಕೆ ಶಕ್ತರಾಗುತ್ತಿರಲಿಲ್ಲ (ಅಪೊಸ್ತಲರ ಕೃತ್ಯಗಳು 22:3).

## ಆತನ ಶಿಕ್ಷಣ

ವೈಶಿಷ್ಟ್ಯವಾದ ಯೆಹೂದಿ ಮನೆಗಳಲ್ಲಿ, ಪುರುಷ ಸದಸ್ಯರು ತಮ್ಮ ಐದನೆಯ ವಯಸ್ಸಿನಲ್ಲಿ ಧರ್ಮಶಾಸ್ತ್ರ ಓದುವದನ್ನು ಆರಂಭಿಸುತ್ತಿದ್ದರು. ಪೌಲನು ಬಹುಶಃ ತಾರ್ಸದಲ್ಲಿ ಗ್ರೀಕ್ ಶಾಲೆಗಳಿಗೆ ಹೋಗಿರಬಹುದಾಗಿದೆ. ಹೊಸ ಒಡಂಬಡಿಕೆಯ ವಾಕ್ಯಭಾಗಗಳು ತೋರ್ಪಡಿಸುವ ಪ್ರಕಾರ ಆತನಿಗೆ ಗ್ರೀಕ್ ಬರಹಗಾರರ ಪರಿಚಯವಿತ್ತು. ಅಪೊಸ್ತಲರ ಕೃತ್ಯಗಳು 17:28ರಲ್ಲಿ, ಆತನು ಕ್ರಿ.ಪೂ. 650 ರಲ್ಲಿ ಮರಣಿಸಿದ್ದ, ಕ್ರೇತದ್ವೀಪಕ್ಕೆ ಸೇರಿದ ಪ್ರವಾದಿ Epimenidesನ ಉಲ್ಲೇಖನ ಮಾಡುತ್ತಾನೆ. 1 ಕೊರಿಂಥ 15:33ರಲ್ಲಿ, ಆತನು ಕ್ರಿ.ಪೂ. 300ರಲ್ಲಿ ಮರಣಿಸಿದ್ದ, ಗ್ರೀಕ್ ನಾಟಕಕಾರನಾದ Menanderನ ಉಲ್ಲೇಖನ ಮಾಡುತ್ತಾನೆ.

ಪೌಲನು ಹದಿಹರೆಯದ ಪ್ರಾಯದಲ್ಲಿರುವ ವೇಳೆ ರಬ್ಬಿ ಗಮಲಿಯೇಲನ ಬಳಿಗೆ ಶಿಕ್ಷಣಕ್ಕಾಗಿ ಕಳುಹಿಸಲ್ಪಟ್ಟಿದ್ದನು (ಅಪೊಸ್ತಲರ ಕೃತ್ಯಗಳು 22:3; 5:34).[4] ಆತನು ತನ್ನ ವಿದ್ಯಾಭ್ಯಾಸದಲ್ಲಿ ಉನ್ನತಿಯನ್ನು ಸಾಧಿಸಿದನು ಮತ್ತು ಯೆಹೂದಿ ಸಂಪ್ರದಾಯಗಳಿಗಾಗಿ ವೈರಾಗ್ಯವುಳ್ಳವನಾದನು (ಗಲಾತ್ಯ 1:11-14). ಫಿಲಿಷ್ಟಿಯದಲ್ಲಿ ಆತನು ಅರಾಮಿಕ್ ಭಾಷೆಯನ್ನಾಡಿರಬಹುದಾಗಿದೆ; ಹೀಗೆ ಪೌಲನು ಇಬ್ರಿಯ, ಗ್ರೀಕ್, ಮತ್ತು ಅರಾಮಿಕ್ ಭಾಷೆಗಳನ್ನು ಮಾತಾಡುವನಾಗಿದ್ದನು ಎಂಬರ್ಥವಾಗುತ್ತದೆ.

ಪೌಲನ ಕಾಲದಲ್ಲಿ ಹುಡುಗನಿಗೆ ವಿದ್ಯಾಭ್ಯಾಸವನ್ನು ನೀಡುವದರ ಜೊತೆಗೆ ಅವನಿಗೊಂದು "ಕಸಬು" ಕಲಿಸಿ ಕೊಡುವ ಪದ್ಧತಿಯೊಂದಿತ್ತು.[5] ಪೌಲನಿಗೆ ಗುಡಾರ ತಯಾರಿಸುವದನ್ನು ಕಲಿಸಿ ಕೊಡಲಾಗಿತ್ತು ಎಂಬುದು ಆತನು ತನ್ನ ಸುವಾರ್ತಿಕ ಕೆಲಸದಲ್ಲಿ ತನಗೆ ಸಹಾಯ ಮಾಡಿಕೊಳ್ಳುವದಕ್ಕೆ ಈ ಕುಶಲತೆಯ ಬಳಕೆ ಮಾಡುವದರಿಂದ ಕಂಡು

ಬರುತ್ತದೆ (ಅಪೊಸ್ತಲರ ಕೃತ್ಯಗಳು 18:1-5).

## ಆತನು ಮಾಡಿದ ಹಿಂಸೆಗಳು

ಪೌಲನು ಯೆಹೂದ್ಯ ಮತತ ಕಡೆಗೆ ಅತ್ಯಂಥ ವೈರಾಗ್ಯವುಳ್ಳವನಾಗಿದ್ದರಿಂದಾಗಿ ಸಭೆಯ ಒಬ್ಬ ಕಠೋರ ಹಿಂಸಕನಾದನು. ಆತನು ಕ್ರಿಸ್ತನನ್ನು ಒಬ್ಬ ವೇಷಧಾರಿ ಎಂದು ಕಾಣುತ್ತಿದ್ದನು. ಮೆಸ್ಸೀಯನನು ಒಬ್ಬ "ಸೇನಾನಾಯಕ"ನಾಗಿ ಬರಲಿದ್ದನು ಎಂಬುದು ಒಬ್ಬ ವೈಶಿಷ್ಟ್ಯವಾದ ಯೆಹೂದ್ಯನ ಅಭಿಪ್ರಾಯವಾಗಿತ್ತು. ಒಂದು ವೇಳೆ ಯೇಸುವು ಅವರಂದುಕೊಂಡ ಪ್ರಕಾರವಾದ ನಾಯಕನಾಗಿರುವದಕ್ಕೆ ಮನಸ್ಸುಳ್ಳವನಾಗಿದ್ದಲ್ಲಿ, ಅವರು ಆತನನ್ನು ಅಂಗೀಕರಿಸಿಕೊಂಡಿರುತ್ತಿದ್ದರು (ನೋಡಿರಿ ಯೋಹಾನ 6:15). ಅವರು ಪೂರ್ವಕಲ್ಪನೆ ಮಾಡಿಕೊಂಡ ಮೆಸ್ಸೀಯನ ಚಿತ್ರಣದೊಳಗೆ ಯೇಸು ಹೊಂದಾಣಿಕೆಯಾಗಲಿಲ್ಲ ಎಂಬುದನ್ನು ಕಂಡಾಗ, ಅವರು ಆತನನ್ನು ತಿರಸ್ಕರಿಸಿದರು ಮತ್ತು ಯಾವನಾದರೂ ಆತನನ್ನು ಅಂಗೀಕರಿಸಿಕೊಳ್ಳುವದಾದರೆ ಅಂಥವನನ್ನು ಅವರು ಯೆಹೂದ್ಯ ಧರ್ಮಭ್ರಷ್ಟನೆಂದು ಪರಿಗಣಿಸುತ್ತಿದ್ದರು. ಅವರು ಯೇಸುವನ್ನು ತಿರಿಸ್ಕರಿಸಿದ ಮತ್ತು ಸಭೆಯನ್ನು ಹಿಂಸೆ ಪಡಿಸಿದ್ದರ ಹಿನ್ನಲೆಗೆ ಅವರಿಗಿದ್ದ ಮೆಸ್ಸೀಯನ ಕುರಿತಾದ ಅಪಾರ್ಥದ ಅಭಿಪ್ರಾಯವೇ ಕಾರಣವಾಗಿದೆ. ಈ ಹಿಂಸೆಯಲ್ಲಿ ಪೌಲನು ಒಬ್ಬ ನಾಯಕನಾಗಿದ್ದನು.

## ಆತನ ಪರಿವರ್ತನೆ

ಪೌಲನ ಪರಿವರ್ತನೆಯು ಹೊಸ ಒಡಂಬಡಿಕೆಯಲ್ಲಿನ ಗಮನಾರ್ಹವಾದ ಘಟನೆಗಳಲ್ಲೊಂದಾಗಿದೆ. ಅದರ ಕುರಿತ ವಿವರಣೆಯು ಅಪೊಸ್ತಲರ ಕೃತ್ಯಗಳು ಪುಸ್ತಕದ ಮೂರು ಬೇರೆ ಬೇರೆ ಕಡೆಗಳಲ್ಲಿ ಕೊಡಲ್ಪಟ್ಟಿರುತ್ತದೆ (ಅಪೊಸ್ತಲರ ಕೃತ್ಯಗಳು 9:1-19; 22:3-16; 26:9-18). ಪೌಲನು ತನ್ನ "ಪಿತೃಗಳಿಂದ ಬಂದ ಸಂಪ್ರದಾಯಗಳನ್ನು" ಅಪ್ಪಿಕೊಳ್ಳುವದರಲ್ಲಿ, ಬೋಧಿಸುವದರಲ್ಲಿ, ಮತ್ತು ಸಂರಕ್ಷಿಸುವದರಲ್ಲಿ "ಬಹು ಅಭಿಮಾನ" ಉಳ್ಳವನಾಗಿದ್ದನು (ಗಲಾತ್ಯ 1:11-14). ಕ್ರೈಸ್ತರು ದೇವರ ಧ್ಯೇಯಕ್ಕೆ ಒಂದು ಗಂಡಾಂತರವಾಗಿರುತ್ತಾರೆಂದು ಆತನು ಯಥಾರ್ಥವಾಗಿ ನಂಬಿದ್ದನು (ಅಪೊಸ್ತಲರ ಕೃತ್ಯಗಳು 23:1), ಮತ್ತು ಅವರ ಪ್ರಯತ್ನವನ್ನು ನಿಷ್ಫಲಗೊಳಿಸುವದಕ್ಕೆ ಆತನು ತನಗೆ ಸಾಧ್ಯವಾದದ್ದನ್ನೆಲ್ಲಾ ಮಾಡಿದನು. ವಾಸ್ತವಿಕದಲ್ಲಿ, ಆತನು ಕ್ರೈಸ್ತರ ಮೇಲಿನ ತನ್ನ ಹಿಂಸಾಕೃತ್ಯಗಳನ್ನು ಮುಂದುವರೆಸುವದಕ್ಕಾಗಿಯೇ ದಮಸ್ಕರ ದಾರಿಯಲ್ಲಿದ್ದಾಗ ಕರ್ತನು ಅವನಿಗೆ "ಆಕಾಶದಿಂದ ಒಂದು ಬೆಳಕು" ಕಾಣಿಸುವಂತೆ ಮಾಡಿದ್ದರಿಂದಾಗಿ ಅವನು ಕುರುಡನಾದನು (ಅಪೊಸ್ತಲರ ಕೃತ್ಯಗಳು 9:1-9). ಬಳಿಕ ಯೇಸು ಆತನೊಂದಿಗೆ ಮಾತಾಡಿ ಆತನು ಕ್ರಿಯಾ ಪಥವು ದೇವರಿಗೆ ಬೇಸರವನ್ನು ತಂದಿರುತ್ತದೆಂಬುದನ್ನು ಗ್ರಹಿಸಿಕೊಳ್ಳುವಂತೆ ಮಾಡಿದನು. ಯೇಸು ಪೌಲನಿಗೆ ದಮಸ್ಕಕ್ಕೆ ಹೋಗಬೇಕೆಂದೂ ಅಲ್ಲಿ ಅವನಿಗೆ ಮಾಡಬೇಕಾದದ್ದನ್ನು ತಿಳಿಸಲಾಗುವದೆಂದೂ ಹೇಳಿದನು (ಅಪೊಸ್ತಲರ ಕೃತ್ಯಗಳು 22:10).

ಈ ನಡುವೆ, ಆತನು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂಬ ವಾಸ್ತವಾಂಶವನ್ನು ಒಳಗೊಂಡ, ತನ್ನ ಸಂದೇಶವನ್ನು ಪೌಲನಿಗೆ ಸಾರುವದಕ್ಕಾಗಿ ದೇವರು ಅನನೀಯನನ್ನು ಕಳುಹಿಸಿ ಕೊಟ್ಟನು (ಅಪೊಸ್ತಲರ ಕೃತ್ಯಗಳು 22:16). ಈ ದೀಕ್ಷಾಸ್ನಾನದ ಬಳಿಕ, ಪೌಲನು ಯೆರೂಸಲೇಮಿಗೆ ಹೋದನು, ಅಲ್ಲಿ ದೇವರು ಆತನಿಗೆ ಹೋಗಿ ಅನ್ಯಜನರಿಗೆ ಸುವಾರ್ತೆಯನ್ನು ಸಾರಬೇಕೆಂದು ತಿಳಿಸಿದನು (ಅಪೊಸ್ತಲರ ಕೃತ್ಯಗಳು 22:17-21). ಈ ವಿಧದಲ್ಲಿ ಕ್ರೈಸ್ತತ್ವದ ಹಿಂಸಕನು ಅದರ ಪ್ರಮುಖ ಸಮರ್ಥಕರಲ್ಲೊಬ್ಬನಾದನು. ಪೌಲನು ತನ್ನ ಪರಿವರ್ತನೆಯನ್ನು ಕ್ರಿಸ್ತನು "ನನ್ನನ್ನು ಹಿಡಿದುಕೊಂಡನು" ಎಂಬದಾಗಿ ಬಣ್ಣಿಸುತ್ತಾನೆ (ಫಿಲಿಪ್ಪಿ 3:12). ಆತನು ತನ್ನನ್ನು "ದಿನತುಂಬದೆ ಹುಟ್ಟಿದವನು" ಎಂಬದಾಗಿ ಬಣ್ಣಿಸಿಕೊಂಡನು, ಇದು ಆತನ ಪರಿವರ್ತನೆಯನ್ನು ಸೂಚಿಸಿ ಹೇಳಿದ ಇನ್ನೊಂದು ಮಾತಾಗಿದೆ (1 ಕೊರಿಂಥ 15:8).

### ಒಬ್ಬ ಅಪೊಸ್ತಲನಾಗಿ ಆತನ ಜೀವನ

ಪೌಲನು ತನ್ನ ಪರಿವರ್ತನೆಯ ಬಳಿಕ ದಮಸ್ಕದಲ್ಲಿ "ಅನೇಕ ದಿವಸಗಳ" ತನಕ ಬೋಧನೆ ಮಾಡುವದರೊಂದಿಗೆ ಒಬ್ಬ ಅಪೊಸ್ತಲನಾಗಿ ತನ್ನ ಜೀವನವನ್ನು ಆರಂಭಿಸಿದನು (ಅಪೊಸ್ತಲರ ಕೃತ್ಯಗಳು 9:23). ಆತನು ಆ ಪಟ್ಟಣದಿಂದ ಓಡಿ ಬಂದ ಬಳಿಕ (ಅಪೊಸ್ತಲರ ಕೃತ್ಯಗಳು 9:25), ಅರಬಸ್ಥಾನಕ್ಕೆ ಹೋದ ವೇಳೆಯಲ್ಲಿ ಕ್ರಿಸ್ತನು ಆತನಿಗೆ ಸುವಾರ್ತೆಯ ಹೆಚ್ಚಿನ ವಿವರಗಳನ್ನು ನೀಡಿದ್ದನು (ಗಲಾತ್ಯ 1:11-17). ಮೂರು ವರ್ಷಗಳ ಬಳಿಕ, ಆತನು ಯೆರೂಸಲೇಮಿಗೆ ಹೋಗಿ ಪೇತ್ರನನ್ನು ಮತ್ತು ಯಾಕೋಬನನ್ನು ಭೇಟಿಯಾದನು (ಗಲಾತ್ಯ 1:18, 19). ಯೆರೂಸಲೇಮಿನಿಂದ, ಆತನು ತಾರ್ಸಗೆ (ಅಪೊಸ್ತಲರ ಕೃತ್ಯಗಳು 11:25) ಹೋದನು ಮತ್ತು ಅಲ್ಲಿ ಒಂದು ಸಭೆಯನ್ನು ಸ್ಥಾಪಿಸಿರುವ ಸಾಧ್ಯತೆಯಿರುತ್ತದೆ (ಅಪೊಸ್ತಲರ ಕೃತ್ಯಗಳು 15:23). ನಂತರ, ಅಂತಿಯೋಕ್ಯದಲ್ಲಿನ ಸಭೆಯ ಆಶ್ಚರ್ಯಕರವಾದ ಅಭಿವೃದ್ಧಿಯಿಂದಾಗಿ ಅಲ್ಲಿ ಬಂದು ತನಗೆ ಸುವಾರ್ತೆಯ ಕೆಲಸದಲ್ಲಿ ಸಹಾಯವನ್ನು ಮಾಡುವ ಹಾಗೆ ಸೌಲನನ್ನು ಸಂಪರ್ಕಿಸಿ ಆತನನ್ನು ಅಂತಿಯೋಕ್ಯಕ್ಕೆ ಕರೆ ತರುವದನ್ನು ಅವಶ್ಯಕಗೊಳಿಸಿತ್ತು (ಅಪೊಸ್ತಲರ ಕೃತ್ಯಗಳು 11:25). ಆತನು ಅಂತಿಯೋಕ್ಯದಲ್ಲಿ ಪ್ರಯಾಸವನ್ನು ಪಟ್ಟ ಬಳಿಕ, ಆತನನ್ನು ಮೂರು ಮಹತ್ವಪೂರ್ಣವಾದ ಸುವಾರ್ತಾ ಪ್ರಯಾಣಗಳನ್ನು ಮಾಡುವಂತೆ ಅಲ್ಲಿಂದ ಕಳುಹಿಸಲ್ಪಟ್ಟನು (ಅಪೊಸ್ತಲರ ಕೃತ್ಯಗಳು 13:1-21:17). ಆತನ ಕರೆಯ ಸ್ವಭಾವ ಮತ್ತು ಆತನು ಮಾಡಿದ ಸೇವೆಯ ಸ್ವಭಾವದ ಕಾರಣದಿಂದಾಗಿ, ಆತನು "ಅನ್ಯಜನರಿಗೆ ಅಪೊಸ್ತಲನು" ಎಂದು ಕರೆಯಲ್ಪಟ್ಟಿರುತ್ತಾನೆ (ರೋಮಾ 11:13; ನೋಡಿರಿ ಅಪೊಸ್ತಲರ ಕೃತ್ಯಗಳು 9:15; ಗಲಾತ್ಯ 2:6-9).

## ಪೌಲನು ಮತ್ತು ಥೆಸಲೋನಿಕ

ಪೌಲನು ಸುಮಾರು ಕ್ರಿ.ಶ. 50-51ರಲ್ಲಿ ತನ್ನ ಎರಡನೆಯ ಸುವಾರ್ತಾ ಪ್ರಯಾಣದ ವೇಳೆ ಥೆಸಲೋನಿಕಕ್ಕೆ ಹೋದನು. ಥೆಸಲೋನಿಕವು ಗ್ರೀಸ್ ದೇಶದ ಮೇಲಿನ ಭಾಗದಲ್ಲಿತ್ತು (ಪುಟ 16ರಲ್ಲಿರುವ "ಪೌಲನ ಎರಡನೆಯ ಸುವಾರ್ತಾ ಪ್ರಯಾಣ" ನಕ್ಷೆಯನ್ನು ನೋಡಿರಿ).

ಆತನ ಭೇಟಿ ಮತ್ತು ಆತನ ಸಾರುವಿಕೆಯ ಮೂಲಕ ಉಂಟಾದ ಫಲಿತಗಳ ಕುರಿತು ಅಪೊಸ್ತಲರ ಕೃತ್ಯಗಳು 17:1-9ರಲ್ಲಿ ಬರೆಯಲಾಗಿರುತ್ತದೆ. ಆ ಪಟ್ಟಣದಲ್ಲಿರುವ ವೇಳೆ "ಮೂರು ಸಬ್ಬತ್ ದಿನಗಳಲ್ಲಿ" ಸಭಾಮಂದಿರಗಳಿಗೆ ಹೋಗಿ ಅಲ್ಲಿ ಬೋಧನೆಯನ್ನು ಮಾಡಿದನೆಂಬುದನ್ನು ಗಮನಿಸಿರಿ (17:2).

ಮೂರನೆಯ ಸುವಾರ್ತಾ ಪ್ರಯಾಣದ ವೇಳೆ, ಎಫೆಸದಲ್ಲಾದ ಗಲಭೆಯ ಬಳಿಕ, ಆತನು ಮಕೆದೋನ್ಯಕ್ಕೆ ಹಿಂದಿರುಗಿದನು (ಅಪೊಸ್ತಲರ ಕೃತ್ಯಗಳು 20:1, 2). ಈ ವಾಕ್ಯ ಭಾಗದಲ್ಲಿ ಥೆಸಲೋನಿಕದ ಹೆಸರು ನಿರ್ದಿಷ್ಟವಾಗಿ ಹೇಳಲ್ಪಟ್ಟಿಲ್ಲವಾದರೂ, ಆತನು ಸಹೋದರರನ್ನು ಪ್ರಬೋಧಿಸುವವನಾಗಿ ಈ ಪ್ರಾಂತ್ಯಗಳನ್ನು ಅಥವಾ ಜಿಲ್ಲೆಗಳನ್ನು ಹಾಯ್ದು ಹೋದನೆಂಬದನ್ನಂತೂ ಅದು ತಿಳಿಸುತ್ತದೆ. ನಿಶ್ಚಯವಾಗಿಯೂ, ಪೌಲನು ಥಸಲೋನಿಕದವರನ್ನು ಭೇಟಿಯಾಗಿ ಅವರನ್ನು ಪ್ರೋತ್ಸಾಹಿಸದೆಯೇ ಈ ಪ್ರಾಂತ್ಯವನ್ನು ದಾಟಿ ಹೋಗಿರಲಾರನು ಎಂದು ಹೇಳಿದರೆ ತಪ್ಪಾಗಲಾರದು.

## ಥೆಸಲೋನಿಕ: ಆಗ ಮತ್ತು ಈಗ

ಥೆಸಲೋನಿಕವು ಕ್ರಿ.ಪೂ. 315ರಲ್ಲಿ ಮಕೆದೋನ್ಯದ ಅರಸನಾದ Cassanderನಿಂದ ಸ್ಥಾಪಿಸಲ್ಪಟ್ಟದ್ದಾಗಿದ್ದು, ಆತನು ಆ ಪಟ್ಟಣಕ್ಕೆ ತನ್ನ ಪತ್ನಿಯಾದ "ಥೆಸಲೋನಿಕಾ"[6] ಎಂಬವಳ ಹೆಸರನ್ನಿಟ್ಟನು. ಥೆಸಲೋನಿಕವು ಪ್ರಸಿದ್ಧ Egnatian ಮಾರ್ಗದಲ್ಲಿದ್ದ ಕಾರಣದಿಂದಾಗಿ, ಆ ಮಾರ್ಗದಲ್ಲಿ ಪ್ರಯಾಣಿಕರು ಓಡಾಡುತ್ತಿದ್ದರು ಹಾಗು ವಾಣಿಜ್ಯ ವ್ಯವಹಾರಗಳು ನಡೆಯುತ್ತಿದ್ದದರಿಂದ, ಮತ್ತು ಆ ಪಟ್ಟಣದಲ್ಲಿ ಒಂದು ಉತ್ತಮ ಬಂದರು ಇದ್ದದರಿಂದಾಗಿ ಅದು ಅಭಿವೃದ್ಧಿಗೊಂಡಿತು.

ರೋಮನ್ನರು ಕ್ರಿ. ಪೂ. 168ರಲ್ಲಿ ಥೆಸಲೋನಿಕವನ್ನು ಗೆದ್ದುಕೊಂಡರು. ಅವರು ಮಕೆದೋನ್ಯವನ್ನು ನಾಲ್ಕು ಪ್ರಾಂತ್ಯಗಳಾಗಿ ವಿಂಗಡಿಸಿದರು, ಮತ್ತು ಎರಡನೆಯ ಪ್ರಾಂತ್ಯಕ್ಕೆ ಥೆಸಲೋನಿಕವನ್ನು ರಾಜಧಾನಿಯಾಗಿ ಮಾಡಲಾಡಯಿತು. ಕ್ರಮೇಣದಲ್ಲಿ ಆ ಪಟ್ಟಣವು ಎಲ್ಲಾ ಮಕೆದೋನ್ಯಕ್ಕೆ ಒಂದು ಮಹಾನಗರ ಆಯಿತು.

ಪೌಲನು ಅಲ್ಲಿಗೆ ಬಂದು ತಲುಪಿದಾಗ, ಅದು ಏಳು ಮಂದಿ *politarchs*ಗಳಿಂದ (ಆ ಪದಕ್ಕೆ ಅಪೊಸ್ತಲರ ಕೃತ್ಯಗಳು 17:6ರಲ್ಲಿ "ಊರಿನ ಅಧಿಕಾರಿಗಳು" ಎಂಬ ಅನುವಾದ ನೀಡಲಾಗಿರುತ್ತದೆ; NIV) ಆಳ್ವಿಕೆ ಮಾಡಲ್ಪಡುತ್ತಿದ್ದ ಒಂದು ಸ್ವತಂತ್ರ ಪಟ್ಟಣವಾಗಿತ್ತು. ಈ ವ್ಯಕ್ತಿಗಳು ರೋಮನ್ ಪ್ರಾಂತಾಧಿಕಾರಿಗೆ ಉತ್ತರ ಕೊಡುವವರಾಗಿದ್ದರು.

ಪೌಲನು ಅಲ್ಲಿರುವ ವೇಳೆಯಲ್ಲಿ ತನ್ನ ಖರ್ಚುಗಳಿಗೆ ಸಹಾಯವಾಗುವದಕ್ಕಾಗಿ ಗುಡಾರ ತಯಾರಿಸುವ ಕೆಲಸವನ್ನು ಮಾಡುತ್ತಿದ್ದನೆಂಬುದು ಸ್ಪಷ್ಟವಾಗಿರುತ್ತದೆ (1 ಥೆಸಲೋನಿಕ 2:9). ಆಡಿನ-ಕೂದಲುಗಳಿಂದ ತಯಾರಿಸಲಾದ ಬಟ್ಟೆಗಳಿಂದ ಮಾಡಲಾಗುತ್ತಿದ್ದ ಈ ಗುಡಾರಗಳು ಆ ಕಾಲದಲ್ಲಿ "ಸ್ಥಳೀಯ ವಾಣಿಜ್ಯದಲ್ಲಿ ಒಂದು ಪ್ರಮುಖ ಭಾಗವಾಗಿತ್ತು"[7] ಎಂಬುದರೊಂದಿಗೆ ಇದು ಸರಿಯಾಗಿಯೇ ಹೊಂದಾಣಿಕೆ ಯಾಗುತ್ತದೆ.

ಪಟ್ಟಣದ ಜನಸಂಖ್ಯೆಯಲ್ಲಿ ಸ್ವಲ್ಪ ಯೆಹೂದ್ಯರು ಸೇರಿದ್ದರು (ಅಪೊಸ್ತಲರ ಕೃತ್ಯಗಳು 17:1) ಆದರೆ ಮುಖ್ಯವಾಗಿ ಅನ್ಯಜನರೇ ಅಧಿಕವಾಗಿದ್ದರು (ನೋಡಿರಿ ಅಪೊಸ್ತಲರ ಕೃತ್ಯಗಳು

17:4; 1 ಥೆಸಲೋನಿಕ 1:9; 2:14). ಪೌಲನು ಥೆಸಲೋನಿಕವನ್ನು ಬಿಟ್ಟು ಹೋಗುವ ವೇಳೆ, ಆತನನ್ನು ಹಿಂಸಿಸುವದಕ್ಕಾಗಿ ಯೆಹೂದ್ಯರು ಬೆರೋಯದ ತನಕವೂ ಆತನನ್ನು ಹಿಂಬಾಲಿಸಿಕೊಂಡು ಹೋಗಿದ್ದರು (ಅಪೊಸ್ತಲರ ಕೃತ್ಯಗಳು 17:13, 14). ಥೆಸಲೋನಿಕದಲ್ಲಿದ್ದ ಅನ್ಯಜನರಲ್ಲಿ ಬಹುಪಾಲು ಗ್ರೀಕ್ ರು ಮತ್ತು ಸ್ವಲ್ಪ ಸಂಖ್ಯೆಯಲ್ಲಿ ರೋಮನ್ನರು ಇದ್ದರು.

ಆಧುನಿಕ ಪಟ್ಟಣವು ಒಂದು ಸುಂದರವಾದ ಬಂದರು ಹೊಂದಿರುವ ಸುಮಾರು 809,457 ಜನರನ್ನೊಳಗೊಂಡ (2001ರ ಜನಗಣತಿಯ ಪ್ರಕಾರವಾಗಿ) ಊರಾಗಿದ್ದು ಅದಕ್ಕೆ ಸಲೋನಿಕಿ ಅಥವಾ ಥೆಸಲೋನಿಕಿ ಎಂದು ಹೆಸರಿಡಲಾಗಿರುತ್ತದೆ. ಅದು ಗ್ರೀಸ್ ದೇಶದಲ್ಲಿ ಎರಡನೆಯ ಅತ್ಯಂಥ ದೊಡ್ಡ ಪಟ್ಟಣವಾಗಿರುತ್ತದೆ. ಈ ದಿನದ ತನಕ ಸಹ, ಅಲ್ಲಿ ಬಟ್ಟೆ ಕಾರ್ಖಾನೆಗಳು, ಸೋಪು ತಯಾರಿಸುವ ಮತ್ತು ತಂಬಾಕು ಸಂಸ್ಕರಿಸುವ ಮಾಡುವ ಕಾರ್ಖಾನೆಗಳು ಇರುತ್ತವೆ. ಈಗಿನ ಜನಸಂಖ್ಯೆಯಲ್ಲಿ ಸುಮಾರು 50,000 ಯೆಹೂದ್ಯರು ಸೇರಿರುತ್ತಾರೆ, ಅವರ ಪೂರ್ವಜರು ಹದಿನಾರನೆಯ ಶತಮಾನದಲ್ಲಿ Portugal ಮತ್ತು Spain ದೇಶಗಳಿಂದ ಬಂದವರಾಗಿದ್ದರು.

## ಬರೆದ ಸಂದರ್ಭ, ದಿನಾಂಕ, ಮತ್ತು ಸ್ಥಳ

ಪೌಲನು ತನ್ನ ಎರಡನೆಯ ಸುವಾರ್ತಾ ಪ್ರಯಾಣದ ವೇಳೆ ಥೆಸಲೋನಿಕದಲ್ಲಿ ಸಭೆಯನ್ನು ಸ್ಥಾಪಿಸಿದ ಬಳಿಕ, ಯೆಹೂದ್ಯರು ಹಿಂಸೆಯನ್ನು ಮಾಡಿದ್ದರಿಂದ ಆತನು ಮಧ್ಯದಲ್ಲಿಯೇ ಥೆಸಲೋನಿಕವನ್ನು ತೊರೆದು ಹೋಗಬೇಕಾಯಿತು (ಅಪೊಸ್ತಲರ ಕೃತ್ಯಗಳು 17:1-10). ಆತನು ಅಲ್ಲಿ ಕೇವಲ ಮೂರು ಅಥವಾ ನಾಲ್ಕು ತಿಂಗಳ ಕಾಲ ಮಾತ್ರವೇ ಉಳಿದುಕೊಂಡಿದ್ದನು.

ಅವರಿಗೆ ಕರ್ತನಲ್ಲಿ ಪರಿಪಕ್ವಗೊಳ್ಳುವಂತೆ ಸಹಾಯ ಮಾಡುವದಕ್ಕೆ ಮತ್ತು ಇನ್ನಷ್ಟು ಬೋಧನೆಯನ್ನು ಮಾಡುವದಕ್ಕೆ ಪುನಃ ಅಲ್ಲಿಗೆ ಹೋಗಬೇಕೆಂದಿದ್ದನು, ಆದರೆ ಆತನಿಗೆ ವಿಘ್ನವುಂಟಾಗಿತ್ತು (2:17, 18). ಆ ವಿಘ್ನವು ಏನೆಂದರೆ ಒಂದು ವೇಳೆ ಆತನು ಬೋಧಿಸುವದಕ್ಕಾಗಿ ಅಲ್ಲಿಗೆ ಹಿಂದಿರುಗಿ ಹೋಗುವದಾದರೆ ಆತನು ವೈಯಕ್ತಿಕವಾಗಿ ಹಿಂಸಾಚಾರಕ್ಕೆ ಗುರಿಯಾಗುವ ಅಪಾಯವು ಇತ್ತು. ಕೆಲವರು ಇದನ್ನು ಉಪಯೋಗಿಸಿಕೊಂಡು ಆತನಿಗೆ ಅವರ ಮೇಲೆ ಪ್ರೀತಿಯೇ ಇರಲಿಲ್ಲ ಎಂಬದಾಗಿ ಹೇಳಬಹುದಾಗಿದೆ. ಆ ಕಾರಣದಿಂದ, ಆತನು ಇನ್ನೂ ತನ್ನ ಎರಡನೆಯ ಪ್ರಯಾಣದಲ್ಲಿರುವಾಗಲೇ, ಅವರನ್ನು ಸಂಧಿಸಿಕೊಂಡು ಬರುವದಕ್ಕಾಗಿ ಅಥೇನೆಯಿಂದ ತಿಮೊಥೆಯನನ್ನು ಕಳುಹಿಸಿ ಕೊಡುತ್ತಾನೆ (3:1-7).

ಥೆಸಲೋನಿಕದವರೊಂದಿಗೆ ಸ್ವಲ್ಪ ಕಾಲ ಉಳಿದುಕೊಂಡ ಬಳಿಕ, ತಿಮೊಥೆಯು ಕೊರಿಂಥದಲ್ಲಿದ್ದ ಪೌಲನ ಬಳಿಗೆ ಹೋಗುತ್ತಾನೆ. ಆತನು ಪೌಲನಿಗಾಗಿ ತಂದ ಸುದ್ದಿಯು ಮೂಲತಃ ಒಳ್ಳೆಯದೇ ಆಗಿತ್ತು (1 ಥೆಸಲೋನಿಕ 3:6, 7). ಹೇಗೂ, ಅವರಲ್ಲಿ ಯೇಸುವಿನ ಎರಡನೆಯ ಬರೋಣದ ಕುರಿತಾಗಿ ಕೆಲವೊಂದು ತಪ್ಪು ತಿಳುವಳಿಕೆಗಳಿರುತ್ತವೆಂಬದಾಗಿ ಪೌಲನಿಗೆ ತಿಳಿಸಲಾಯಿತು, ಆದ್ದರಿಂದ ಆತನು ಅವರಿಗೆ ಕೊರಿಂಥದಲ್ಲಿದ್ದುಕೊಂಡು 1 ಥೆಸಲೋನಿಕದವರಿಗೆ ಪತ್ರಿಕೆಯನ್ನು ಬರೆದನು. ಹೆಚ್ಚು ಕಡಿಮೆ ತಿಮೊಥೆಯನು

ಕೊರಿಂಥಕ್ಕೆ ಹೋಗಿ ಪೌಲನನ್ನು ಸೇರಿಕೊಂಡ ತಕ್ಷಣದಲ್ಲೇ ಈ ಪತ್ರಿಕೆಯು ಬರೆಯಲ್ಪಟ್ಟಿತೆಂಬದಾಗಿ ಭಾವಿಸಲಾಗಿರುತ್ತದೆ.

ಸಭೆಯು ಕ್ರಿ.ಶ. 50-51ರಲ್ಲಿ ಸ್ಥಾಪಿಸಲ್ಪಟ್ಟಿದ್ದರೆ, ಈ ಪತ್ರಿಕೆಯು ಕ್ರಿ.ಶ. 51ರಲ್ಲಿ ಬರೆಯಲ್ಪಟ್ಟಿರಬಹುದಾಗಿದೆ. ಪೌಲನು ಕೊರಿಂಥದಲ್ಲಿ ತಂಗಿದ್ದ ದಿನಾಂಕವು 1909ರಲ್ಲಿ Delphi ಎಂಬ ಸ್ಥಳದಲ್ಲಿ ಸಿಕ್ಕ ಶಿಲಾಶಾಸನದದೊಂದಿಗೆ ಜೋಡನೆ ಹೊಂದಿರುತ್ತದೆ, ಅದರಲ್ಲಿ ಗಲ್ಲಿಯೋನನು ಕ್ರಿ.ಶ. 52ರಲ್ಲಿ ಬಂದು ತಲುಪಿದನು ಎಂಬುದನ್ನು ದೃಢೀಕರಿಸಲಾಗಿರುತ್ತದೆ (ನೋಡಿರಿ ಅಪೊಸ್ತಲರ ಕೃತ್ಯಗಳು 18:12). ಈ ಪುರಾವೆಯನ್ನು ಆಧಾರವಾಗಿಟ್ಟುಕೊಂಡು, ಪೌಲನು ಆ ಸಭೆಯನ್ನು ಭೇಟಿ ಮಾಡಿ ಸುಮಾರು ಆರು ತಿಂಗಳು ಕಳೆದ ಬಳಿಕ, ಕ್ರಿ.ಶ. 51 ರಲ್ಲಿ 1 ಥೆಸಲೋನಿಕದವರಿಗೆ ಪತ್ರಿಕೆಯು ಬರೆಯಲ್ಪಟ್ಟಿತೆಂಬ ನಿರ್ಣಯಕ್ಕೆ ಬರಬಲ್ಲೆವು (2:17ರೊಂದಿಗೆ ಹೋಲಿಸಿ ನೋಡಿರಿ). ಇದು ಹೊಸ ಒಡಂಬಡಿಕೆಯಲ್ಲಿಯೇ ಬರೆಯಲ್ಪಟ್ಟ ಪ್ರಥಮ ಪತ್ರಿಕೆಯಾಗಿರುತ್ತದೆ. ವಾಸ್ತವದಲ್ಲಿ, ಅದು ಕ್ರಿಸ್ತನು ಮರಣಿಸಿ ಇಪ್ಪತ್ತಕ್ಕೂ ಕಡಿಮೆ ವರ್ಷಗಳೊಳಗೆ ಬರೆಯಲ್ಪಟ್ಟಿತ್ತು.

## ಉದ್ದೇಶಗಳು ಮತ್ತು ಚರ್ಚೆಯಾಂಶಗಳು

ಥೆಸಲೋನಿಕದವರು ಅನುಭವಿಸುತ್ತಿದ್ದ ಹಿಂಸೆಯಲ್ಲಿ ಅವರಿಗೆ ಸಾಂತ್ವನ ಹೇಳುವದಕ್ಕಾಗಿ (2:4-3:5), ಪ್ರತಿಕೂಲ ಪರಿಸ್ಥಿತಿಯಲ್ಲಿ ಅವರು ಹೊಂದಿದ ಜಯದಲ್ಲಿ ಅವರೊಂದಿಗೆ ಸಂತೋಷಪಡುವದಕ್ಕಾಗಿ (3:6-10), ಮತ್ತು ಅವರಲ್ಲಿ ಕೆಲವೊಂದು ನೈತಿಕ ಅಜಾಕರೂಕತೆಗಾಗಿ ಅವರನ್ನು ಗದರಿಸುವದಕ್ಕಾಗಿ (4:1-8) ಪೌಲನು ಈ ಪತ್ರಿಕೆಯನ್ನು ಬರೆದನು. ಹೇಗೂ, ಪೌಲನ ಅತ್ಯಂಥ ಪ್ರಧಾನವಾದ ಉದ್ದೇಶವು ಕ್ರಿಸ್ತನ ಎರಡನೆಯ ಬರೋಣದ ಕುರಿತಾಗಿದ್ದ ತಪ್ಪಾದ ಅಭಿಪ್ರಾಯಗಳನ್ನು ಸರಿಪಡಿಸುವದೇ ಆಗಿತ್ತೆಂಬುದು ಆ ಅಂಶಕ್ಕೆ ಕೊಟ್ಟ ಹೆಚ್ಚಿನ ಸ್ಥಳಾವಕಾಶದಿಂದ ನಿರ್ಧರಿಸಬಹುದಾಗಿದೆ (4:13-5:11). ವಾಸ್ತವಿಕದಲ್ಲಿ, 1 ಮತ್ತು 2 ಥೆಸಲೋನಿಕದವರಿಗೆ ಬರೆದ ಪತ್ರಿಕೆಗಳ ಒಟ್ಟಾರೆಗಳಲ್ಲಿ ನಾಲ್ಕರಲ್ಲಿ ಒಂದು ಭಾಗದಷ್ಟು ವಚನಗಳು ಈ ಚರ್ಚೆಯಾಂಶದಕ್ಕೆ ಸಮರ್ಪಿತವಾಗಿರುತ್ತವೆ.

ಪತ್ರಿಕೆಯ ಪ್ರಮುಖ ಚರ್ಚೆಯಾಂಶಗಳಲ್ಲಿ ಇವುಗಳು ಸೇರಿರುತ್ತವೆ: ಮೂರು ವ್ಯಕ್ತಿಗಳಲ್ಲಿ ಅಸ್ತಿತ್ವದಲ್ಲಿರುವಂಥ (1:5, 6; 4:8; 5:19) ಒಬ್ಬನೇ ಏಕೈಕ ದೇವರು (1:9), ಕ್ರಿಸ್ತನ ದೇವತ್ವ (3:11, 12), ಶಿಲುಬೆಯಿಂದ ಫಲಿತಗೊಂಡ ರಕ್ಷಣೆ (4:14; 5:9, 10), ಶಾಸ್ತ್ರಗಳ ಪ್ರೇರಣೆ ಮತ್ತು ಅಧಿಕಾರ (2:13), ಕ್ರಿಸ್ತನೊಂದಿಗೆ ವಿಶ್ವಾಸಿಗಳಿಗಿರುವ ಸಹವಾಸ (1:1; 5:5), ವೈಯಕ್ತಿಕ ಪವಿತ್ರತೆಗೆ ಸಂಬಂಧಿಸಿದಂತೆ ಪರಿಶುದ್ಧಗೊಳಿಸಲ್ಪಡುವಿಕೆ (4:3-8), ಮತ್ತು ಒಬ್ಬನು ಭೌತಿಕವಾಗಿ ಪೋಷಣೆ ಹೊಂದುವದಕ್ಕೆ ಪರಿಶ್ರಮವಹಿಸುವಿಕೆ (4:11, 12; 5:12-15).

## ಸಂಕ್ಷಿಪ್ತ ವರ್ಣನೆ[8]

I. ಕೃತಜ್ಞತಾಸ್ತುತಿ ಮತ್ತು ತನ್ನ ಕುರಿತು ಪ್ರತಿವಾದ (ಅಧ್ಯಾಯಗಳು 1—3)
   A. ವಂದಿಸುವದು (1:1)
   B. ಥೆಸಲೋನಿಕದವರಿಗೋಸ್ಕರ ಕೃತಜ್ಞತಾಸ್ತುತಿ ಸಲ್ಲಿಕೆ (1:2-4)

C. ಥೆಸಲೋನಿಕದವರು ಆದುಕೊಂಡವರೆಂಬದರ ಖಚಿತತೆ (1:5-7)
D. ಥೆಸಲೋನಿಕದವರು ತೋರಿಸಿದ ಮಾದರಿಯ ಪ್ರಭಾವ (1:8-10)
E. ಥೆಸಲೋನಿಕದಲ್ಲಿ ತನ್ನ ಸೇವೆಯ ಬಗ್ಗೆ ಪೌಲನ ಸಮರ್ಥನೆ (2:1-12)
   1. ಆತನ ಸೇವೆಯ ಯಶಸ್ಸು (2:1-8)
   2. ಆತನ ಸೇವೆಯ ಋಜುತ್ವ (2:9-12)
F. ಆತನ ಸೇವೆ ಮತ್ತು ಸಂದೇಶಕ್ಕೆ ಥೆಸಲೋನಿಕವದರ ಪ್ರತಿಕ್ರಿಯೆ (2:13-16)
G. ಅವರ ಮೇಲೆ ಪೌಲನಿಗಿದ್ದ ಶಾಶ್ವತವಾದ ಆಸಕ್ತಿ (2:17-20)
H. ಥೆಸಲೋನಿಕದಲ್ಲಿ ತಿಮೊಥೆಯನಿಗಿದ್ದ ಧ್ಯೇಯ (3:1-5)
I. ತಿಮೊಥೆಯನಿಂದ ತರಲ್ಪಟ್ಟ ಸುದ್ದಿಯಿಂದ ಸಂತೋಷ (3:6-10)
J. ಪೌಲ ಹಾಗೂ ಆತನ ಜೊತೆಗೆಲಸದವರಿಂದ ಹಾರೈಕೆಗಳು ಮತ್ತು ಪ್ರಾರ್ಥನೆಗಳು (3:11-13)

II. ಇನ್ನಷ್ಟು ಬೋಧನೆ ಮತ್ತು ಬುದ್ಧಿವಾದ (ಅಧ್ಯಾಯಗಳು 4; 5)
A. ಪರಿಶುದ್ಧ ಜೀವನ ನಡಿಸುವಂತೆ ಬುದ್ಧಿವಾದ (4:1-8)
B. ಸಹೋದರ ಪ್ರೀತಿಯಲ್ಲಿರಬೇಕೆಂದು ಬುದ್ಧಿವಾದ (4:9-12)
C. ಕ್ರಿಸ್ತನ ಎರಡನೆಯ ಬರೋಣದ ಕುರಿತು ಬೋಧನೆ (4:13-18)
D. ಕ್ರಿಸ್ತನ ಎರಡನೆಯ ಬರೋಣದ ಸಮಯದ ಕುರಿತ ಬೋಧನೆ (5:1-11)
E. ಕಾರ್ಯರೂಪದ ಬುದ್ಧಿವಾದಗಳು (5:12-22)
F. ಮುಕ್ತಾಯದ ವಿಷಯಗಳು (5:23-28)

# ಅನ್ವಯಿಸುವಿಕೆ

## ನಾಯಕನನ್ನು ಹಿಂಬಾಲಿಸು

ಇತರರಿಗೆ ಪ್ರಯೋಜಕ ಮತ್ತು ಸಹಾಯಕವಾಗಿರುವಂಥ ಜೀವಿತಗಳನ್ನು ನಾವು ಹೇಗೆ ನಡಿಸುವದಕ್ಕೆ ಸಾಧ್ಯ? ಈ ಪ್ರಶ್ನೆಗೆ ಉತ್ತರಿಸುವದಕ್ಕಾಗಿ ಹೊಸ ಒಡಂಬಡಿಕೆಯು ನಮಗೆ ಎರಡು ದೃಷ್ಟಿಕೋನಗಳನ್ನು ಒದಗಿಸುತ್ತದೆ.

ಮೊದಲನೆಯದು, ಹೊಸ ಒಡಂಬಡಿಕೆಯು ನಮಗೆ ದೇವರ ಒಂದು ಚಿತ್ರಣವನ್ನು ಕೊಡುತ್ತದೆ. ದೇವರು ಯೇಸುವನ್ನು ಕಳುಹಿಸಿ ಕೊಟ್ಟನು ಮತ್ತು ಭೂಮಿಯ ಮೇಲೆ ಆತನು ನಡಿಸಿದ ಜೀವನದ ವಿವರಗಳನ್ನು ನಮಗೋಸ್ಕರ ಸುವಾರ್ತೆಗಳಲ್ಲಿ ಬರೆದಿಟ್ಟಿರುತ್ತಾನೆ. ಯೇಸುವು ದೇವರ ತತ್ವದ ಮೂರ್ತಿ ಆಗಿದ್ದಾನೆ (ಇಬ್ರಿಯ 1:3). ನಾವು ಮತ್ತಾಯ, ಮಾರ್ಕ, ಲೂಕ, ಮತ್ತು ಯೋಹಾನನು ಬರೆದ ಸುವಾರ್ತೆಗಳಲ್ಲಿ ಯೇಸುವಿನ ಆಲೋಚನೆ, ಮಾತು, ಮತ್ತು ಕ್ರಿಯೆಗಳು ಏನಾಗಿದ್ದವೆಂಬುದರ ಬಗ್ಗೆ ಓದುವಾಗ, ದೇವರು ಏನು ಯೋಚಿಸುವನು, ಹೇಳುವನು, ಮತ್ತು ದೇವರು ಏನು ಮಾಡುವನು ಎಂಬದನ್ನು ಕಾಣುವೆವು.

ಎರಡನೆಯದಾಗಿ, ಹೊಸ ಒಡಂಬಡಿಕೆಯು ನಮಗೆ ದೇವರ ಜನರ ಚಿತ್ರಣವನ್ನು

ಕೊಡುತ್ತದೆ. ಯೇಸುವಿನ ಜೀವನದಲ್ಲಿ ಕಂಡು ಬಂದ ಪ್ರಕಾರದಲ್ಲಿ ದೇವರ ಕುರಿತು ಬೋಧಿಸಲ್ಪಟ್ಟಾಗ ಜನರು ಹೇಗೆ ಪ್ರತಿಕ್ರಿಯೆ ತೋರಿದರೆಂಬುದನ್ನು ಅಪೊಸ್ತಲರ ಕೃತ್ಯಗಳು ಪುಸ್ತಕವು ನಮಗೆ ತೋರಿಸಿ ಕೊಡುತ್ತದೆ. ಜನರು ತನ್ನನ್ನು ಹುಡುಕಬೇಕು, ಆತನಿಗೆ ಪ್ರತ್ಯುತ್ತರ ಕೊಡಬೇಕು, ಮತ್ತು ಆತನ ಸ್ನೇಹಿತರಾಗಬೇಕೆಂದು ದೇವರ ಇಚ್ಛೆಯಾಗಿತ್ತು, ಮತ್ತು ಇದು ದೇವರ ಉದ್ದೇಶವಾಗಿತ್ತೆಂಬದಾಗಿ ಸುವಾರ್ತೆಯ ಬೋಧಕರು ಕಲಿಸಿದನು (ನೋಡಿರಿ ಅಪೊಸ್ತಲರ ಕೃತ್ಯಗಳು 17:26, 27). ಅಲ್ಲದೆ ಪಶ್ಚಾತ್ತಾಪ ಮತ್ತು ವಿಧೇಯತೆಯ ಮೂಲಕ ಈ ಸ್ನೇಹವು ಹೇಗೆ ಒಂದು ವಾಸ್ತವಾಂಶವಾಗಬಲ್ಲದು ಎಂಬುದನ್ನು ಸಹ ಅವರು ಕಲಿಸಿ ಕೊಟ್ಟರು (ನೋಡಿರಿ ಅಪೊಸ್ತಲರ ಕೃತ್ಯಗಳು 17:30). ವಿವಿಧ ದೇಶಗಳು, ಸಂಸ್ಕೃತಿಗಳು, ಮತ್ತು ನಂಬಿಕೆಗಳ ಜನರು ತಮ್ಮ ಜೀವಿತಗಳು ಯೇಸುವಿನ ಜೀವಿತದೊಂದಿಗೆ ಹೋಲಿಸಲ್ಪಟ್ಟಾಗ ಹೇಗೆ ಪ್ರತಿಕ್ರಿಯಿಸಿದರೆಂಬುದನ್ನು ಅಪೊಸ್ತಲರ ಕೃತ್ಯಗಳು ಪುಸ್ತಕವು ದಾಖಲಿಸಿರುತ್ತದೆ. ಅನೇಕರು ತಮ್ಮ ಜೀವಿತಗಳನ್ನು ಬದಲಾಯಿಸಿಕೊಳ್ಳಲು ನಿರಾಕರಿಸಿದರು, ಆದರೆ ಕೆಲವರು ದೇವರ ಸ್ನೇಹದ ಕೊಡುಗೆಯನ್ನು ಅಂಗೀಕರಿಸಿಕೊಂಡರು ಮತ್ತು ಕ್ರೈಸ್ತರಾದರು. ಅಪೊಸ್ತಲರ ಕೃತ್ಯಗಳು ಪುಸ್ತಕವನ್ನು ಓದುವ ಮೂಲಕ ದೇವರ ರಕ್ಷಣೆಯ ಕೊಡುಗೆಗೆ ಇಂದು ಸರಿಯಾದ ವಿಧವನ್ನು ಕುರಿತು ತಿಳಿದುಕೊಳ್ಳುತ್ತೇವೆ.

ಹೊಸ ಕ್ರೈಸ್ತರು ಅನುಭವಿಸುತ್ತಿದ್ದ ದೇವರ ಗುಣಸ್ವಭಾವ ಮತ್ತು ಅವರ ಗುಣಸ್ವಭಾವದ ನಡುವಿನ ಹೋರಾಟದಲ್ಲಿ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಹೊಸ ಒಡಂಬಡಿಕೆಯ ಪತ್ರಗಳು, ಅಥವಾ ಪತ್ರಿಕೆಗಳು ಬರೆಯಲ್ಪಟ್ಟವು. ಆ ಪುಸ್ತಕಗಳು ನಮ್ಮ ಸ್ವಂತ ಸ್ವಭಾವವನ್ನು ಮತ್ತು ಸಭೆಯಲ್ಲಿರುವ ಇತರರ ಗುಣಸ್ವಭಾವವನ್ನು ಅರ್ಥಮಾಡಿಕೊಳ್ಳುವಂತೆ ಸಹಾಯ ಮಾಡಬಲ್ಲವು. ವೈಯಕ್ತಿವಾಗಿ ಮತ್ತು ದೇವರ ಜನರಾಗಿ ಎರಡೂ ವಿಧದಲ್ಲಿಯೂ ಫಲದಾಯಕ ಮತ್ತು ಪರಿಣಾಮಕಾರಿಯಾಗಿರುವಂತೆ ರೂಪಿಸುವದಕ್ಕಾಗಿ ದೇವರು ಕ್ರೈಸ್ತರಾಗಿ ನಮ್ಮ ಜೀವನದಲ್ಲಿ ಹೇಗೆ ಕಾರ್ಯಮಾಡಬಲ್ಲನೆಂಬುದನ್ನು ಅವುಗಳು ತೋರಿಸಿ ಕೊಡುತ್ತವೆ.

ಮೊದಲ ಥೆಸಲೋನಿಕದವರಿಗೆ ಪತ್ರಿಕೆಯು ಗ್ರೀಸ್ ದೇಶದ ಉತ್ತರ ದಿಕ್ಕಿನಲ್ಲಿರುವ ಮಕೆದೋನ್ಯಕ್ಕೆ ಸೇರಿದ ಥೆಸಲೋನಿಕ (ಈಗ ಸಲೋನಿಕಾ ಎಂದು ಕರೆಯಲ್ಪಡುವ) ಪಟ್ಟಣದಲ್ಲಿದ್ದ ಎಳೆಯ ಕ್ರೈಸ್ತರಿಗಾಗಿ ಬರೆಯಲ್ಪಟ್ಟಿತ್ತು. ಪೌಲ, ಸಿಲ್ವಾನ (ಅಥವಾ ಸೀಲ), ಮತ್ತು ತಿಮೊಥೆಯರು ಬೆರೋಯ, ಅಥೇನೆ, ಮತ್ತು ಕೊರಿಂಥ ಪಟ್ಟಣಗಳಿಗೆ ಹೋಗುವ ಮುನ್ನ ಹಾಗೂ ಫಿಲಿಪ್ಪಿಯಲ್ಲಿ ಸುವಾರ್ತೆಯನ್ನು ಸಾರಿದ ಬಳಿಕ ಥೆಸಲೋನಿಕಕ್ಕೆ ಹೋಗಿದ್ದರು. ಥೆಸಲೋನಿಕದಲ್ಲಿನ ಕೆಲವು ಜನರು ತಾವು ದೇವರ ಸಂದೇಶವನ್ನು ನಂಬುವದಕ್ಕೆ ನಿರಾಕರಿಸುವವರಿಂದ ದುರ್ವತನೆಗೆ ಗುರಿಯಾಗುತ್ತೇವೆಂದು ಗೊತ್ತಿದ್ದಾಗ್ಯೂ ಬಹಳ ಸಂತೋಷದಿಂದ ಸುವಾರ್ತೆಗೆ ಸ್ಪಂದಿಸಿದ್ದರು (ಅಪೊಸ್ತಲರ ಕೃತ್ಯಗಳು 17:1-9). 1 ಥೆಸಲೋನಿಕದವರಿಗೆ ಬರೆದ ಪುಸ್ತಕವು ಈ ಬೋಧಕರು ಆ ಸ್ಥಳವನ್ನು ತೊರೆದ ಬಳಿಕ ಬರೆಯಲ್ಪಟ್ಟ ಎರಡು ಪತ್ರಿಕೆಗಳಲ್ಲಿ ಮೊದಲನೆಯದ್ದಾಗಿದೆ. ಇದು ಎಳೆಯ ಕ್ರೈಸ್ತರಿಗೆ ನಂಬಿಗಸ್ತರಾಗಿ ಉಳಿಯುವಂತೆ ಮತ್ತು ದೇವರೊಂದಿಗಿನ ಹಾಗೂ ಪರಸ್ಪರರೊಂದಿಗಿನ

ತಮ್ಮ ಸಂಬಂಧದಲ್ಲಿ ವೃದ್ಧಿಗೊಳ್ಳುವಂತೆ ಸಹಾಯ ಮಾಡುವದಕ್ಕೆ ರಚಿಸಲ್ಪಟ್ಟಿತ್ತು.

ಈ ಪುಸ್ತಕವು ಉಪದೇಶಕರು ಅಥವಾ ಬೋಧಕರಾಗಿ ನಾವು ಜನರೊಂದಿಗೆ, ವಿಶೇಷವಾಗಿ ಜೊತೆಯ ಕ್ರೈಸ್ತರೊಂದಿಗೆ ಕೆಲಸ ಮಾಡುವ ರೀತಿಯ ಕುರಿತಾಗಿ ನಮಗೊಂದು ಪ್ರಾಮುಖ್ಯವಾದ ಪಾಠವನ್ನು ಮುಂದಿಡುತ್ತದೆ. ನಮ್ಮ ಕರ್ತನಾದ ಯೇಸುವನ್ನು ಹಿಂಬಾಲಿಸುವದರಲ್ಲಿ ನಾವು ಒಬ್ಬರಿಗೊಬ್ಬರಿಗೆ ಮತ್ತು ಕುಟುಂಬಗಳಿಗೆ ಹೇಗೆ ಸಹಾಯ ಮಾಡಬಲ್ಲೆವು?

*ಯೇಸುವನ್ನು ಹಿಂಬಾಲಿಸುವದರಲ್ಲಿ ಹಿಂದೆ ಮಾಡಿರುವ ಸಾಧನೆಗಳು.* ನಾವು ಜನರಿಗೆ ಸಹಾಯ ಮಾಡಬಹುದಾದ ಮೊದಲ ದಾರಿಯೆಂದರೆ ಅವರ ಜೀವಿತಗಳಲ್ಲಿನ ಒಳ್ಳೇದನ್ನು ಗಮನಿಸುವದು ಮತ್ತು ಈ ಒಳ್ಳೇ ಗುಣಗಳ ಮೌಲ್ಯವನ್ನು ಒತ್ತಿ ಹೇಳುವದು ಆಗಿರುತ್ತದೆ. ಜನರಲ್ಲಿ ಸಿಕ್ಕುವ ಯಾವದೇ ಒಳ್ಳೇತನವು ಮುಂದಿನ ಬೆಳವಣಿಗೆಗೆ ಒಂದು ಅಸ್ತಿವಾರವಾಗಬಲ್ಲದು. ಅನೇಕ ಸಾರಿ, ಜನರಿಗೆ ಬೆಳೆಯಲು ಸಹಾಯ ಮಾಡುವದಕ್ಕೆ ಪ್ರಯತ್ನಿಸುತ್ತಾ ಇರುವಾಗ, ಅವರ ಜೀವಿತಗಳಲ್ಲಿ ದೇವರು ಈಗಾಗಲೇ ಯೋಗ್ಯವಾದವುಗಳೆಂದು ಮೌಲ್ಯಮಾಪನ ಮಾಡಿರುವಂಥ ಕ್ರಿಯೆಗಳನ್ನು ಹಾಗೂ ಪ್ರತಿಭೆಗಳನ್ನು ನಾವು ಅಸಡ್ಡೆ ಮಾಡುತ್ತೇವೆ ಅಥವಾ ಸ್ವಲ್ಪ ಗಮನವನ್ನು ಕೊಡುತ್ತೇವೆ. ನಾವು ಬೇರೆಯವರಲ್ಲಿರುವ ಒಳ್ಳೇದನ್ನು ಎತ್ತಿ ತೋರಿಸಬೇಕೆಂದು ದೇವರ ಬಯಕೆಯಾಗಿರುತ್ತದೆ.

1 ಥೆಸಲೋನಿಕದವರಿಗೆ ಬರೆದ ಪತ್ರಿಕೆಯ ಲೇಖಕನು ಈ ದಾರಿಯನ್ನೇ ಅನುಸರಿಸುತ್ತಾನೆ. ಈ ಜನರು ತಾವು ಕ್ರೈಸ್ತರಾಗಿ ಕೆಲವು ತಿಂಗಳುಗಳ ಬಳಿಕ ಆರಂಭಿಸಿದ್ದ ಮತ್ತು ವರ್ಷ ವರ್ಷಗಳಿಂದ ಮುಂದುವರೆಸಿಕೊಂಡು ಬಂದಿದ್ದಂಥ ದೇವರೊಂದಿಗಿನ ಮತ್ತು ಪರಸ್ಪರರೊಂದಿಗಿನ ಒಳ್ಳೇ ಸಂಬಂಧಗಳನ್ನು ಜ್ಞಾಪಿಸಿಕೊಳ್ಳುವ ಮೂಲಕ ಈ ಪತ್ರಿಕೆಯು ಆರಂಭಗೊಳ್ಳುತ್ತದೆ (1:6, 9, 10). ಪುಸ್ತಕದ ಈ ಪ್ರಾಮುಖ್ಯವಾದ ಭಾಗವು ಮೊದಲ ಮೂರು ಅಧ್ಯಾಯಗಳನ್ನೆಲ್ಲಾ ಒಳಗೊಂಡಿರುತ್ತದೆ, ಅದು ಇಡೀ ಪುಸ್ತಕದ ಅರ್ಧಭಾಗವಾಗುತ್ತದೆ.

ಥೆಸಲೋನಿಕದವರು ದೇವರನ್ನು ಹಿಂಬಾಲಿಸುವದರ ಪ್ರಾಮುಖ್ಯತೆಯನ್ನು ಗ್ರಹಿಸಿಕೊಂಡಿದ್ದರು ಮತ್ತು ಸುವಾರ್ತೆಗೆ ದೇವರ ಸಂದೇಶವೆಂದು ಸ್ಪಂದಿಸುವ ಮೂಲಕ ಈ ನಂಬಿಕೆಯಂತೆ ನಡೆದುಕೊಂಡಿದ್ದರು (2:13). ಅವರು ಯೇಸುವಿನ ಮೂಲಕ ದೇವರ ಹಿಂಬಾಲಕರಾಗಿದ್ದರು. ತಾವು ದೇವರನ್ನು ಹಿಂಬಾಲಿಸುವದಕ್ಕೆ ಸಹಾಯ ಒದಗಿಸುವ ಒಂದು ಮೂಲವೆಂದರೆ ಜೊತೆಯ ಕ್ರೈಸ್ತರ ಜೀವಿತಗಳನ್ನು ಗಮನಿಸುವದು ಮತ್ತು ಅವರಿಂದ ತೋರಿಸಲ್ಪಟ್ಟ ದೇವರ ಮನೋಭಾವಗಳನ್ನು ಹಾಗೂ ಕ್ರಿಯೆಗಳನ್ನು ಅಳವಡಿಸಿಕೊಳ್ಳುವ ಮೂಲಕವೇ ಎಂಬುದನ್ನು ಅವರು ಗ್ರಹಿಸಿಕೊಂಡಿದ್ದರು. ಥೆಸಲೋನಿಕ ದವರು ತಮ್ಮ ಭಕ್ತಿಯುಳ್ಳ ಜನರ ಮಾದರಿಯನ್ನು ಅನುಸರಿಸುವವರಾಗಿದ್ದರು (1:6; 2:14), ಇತರ ಕ್ರೈಸ್ತರು ಅನುಸರಿಸುವದಕ್ಕೆ ಸಾಧ್ಯವಾಗುವಂಥ ತಾವು ಭಕ್ತಿಯುಳ್ಳ ಮಾದರಿ ಜನರಾಗಿದ್ದರು (1:7). ಈ ಕ್ರೈಸ್ತರು ಅವರ ಹಿಂದಿನ ಜೀವಿತಗಳಲ್ಲಿ ಮತ್ತು ಈಗಿನ ಮನೋಭಾವಗಳಲ್ಲಿ ಯಾವದು ಭಕ್ತಿಯುಳ್ಳ ಮೌಲ್ಯವನ್ನು ಹೊಂದಿತ್ತೆಂಬುದನ್ನು ಗ್ರಹಿಸಿಕೊಳ್ಳುವಂತಾಗಲು ಈ ಘಟನೆಗಳೆಲ್ಲವು ಸಂತೋಷದಿಂದ ಜ್ಞಾಪಿಸಲ್ಪಟ್ಟಿರುತ್ತವೆ.

ಇತರರೊಂದಿಗೆ ಉತ್ತಮ ಸಂಬಂಧವನ್ನು ಕಾಪಾಡಿಕೊಂಡು ಹೋಗುವದಕ್ಕೂ ಅವರ ಬೆಳವಣಿಗೆಯಲ್ಲಿ ಅವರಿಗೆ ಸಹಾಯ ಮಾಡುವದಕ್ಕೂ ಮಾಡಲ್ಪಟ್ಟ ಒಳ್ಳೇದನ್ನು ಪ್ರಶಂಸೆ ಮಾಡುವದು ನಿರಂತರವಾದ ಭಾಗವಾಗಿರುತ್ತದೆ. ಒಳ್ಳೇ ಗುಣಗಳು ನಿರ್ಲಕ್ಷಿಸಲ್ಪಡುವಾಗ ಅಥವಾ ಲಘುವಾಗಿ ತೆಗೆದುಕೊಳ್ಳಲ್ಪಡುವಾಗ, ಸಂಬಂಧಗಳಿಗೆ ಹಾನಿಯಾಗಬಹುದು ಮತ್ತು ಇತರರಿಗೆ ಬೆಳೆಯುವಂತೆ ಸಹಾಯ ಮಾಡಲು ನಾವು ಪಡುವ ಪ್ರಯಾಸಗಳಿಗೆ ವಿಘ್ನವಾಗಬಹುದು.

ತಮ್ಮ ಹೆತ್ತವರಿಂದ ಯಾವಾಗಲೂ ಟೀಕೆಗಳಿಗೆ ಗುರಿಯಾಗುವ ಮಕ್ಕಳಿಗೆ ತಾವು ಪ್ರಶಂಸಿಸಲ್ಪಡದವರು ಮತ್ತು ಪ್ರೀತಿಸಲ್ಪಡದವರು ಎಂಬ ಭಾವನೆ ಉಂಟಾಗುತ್ತದೆ. ಅದರ ಫಲಿತವು ಹೆತ್ತವರು/ಮಕ್ಕಳ ನಡುವಿನ ಸಂಬಂಧವು ಮುರಿದು ಬೀಳುವಿಕೆಯೇ ಆಗಿರುತ್ತದೆ; ತಂದೆತಾಯಿಗಳ ಬುದ್ಧಿವಾದವು ಪರಿಣಾಮವನ್ನು ಕಳೆದುಕೊಳ್ಳುತ್ತದೆ. ಇನ್ನೊಂದೆಡೆಯಲ್ಲಿ, ತಂದೆತಾಯಿಗಳು ನಮ್ಮನ್ನು ಪ್ರೀತಿಸುತ್ತಾರೆ ಮತ್ತು ನಮ್ಮ ಹಿತಾಸಕ್ತಿಯನ್ನು ಹೊಂದಿರುತ್ತಾರೆಂಬ ಭರವಸೆಯು ಮಕ್ಕಳಲ್ಲಿ ಮೂಡುವಾಗ, ಅವರು ತಮ್ಮ ತಂದೆತಾಯಿಗಳು ನೀಡುವ ಸಲಹೆಗಳನ್ನು ಮತ್ತು ಮಾದರಿಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತಾರೆ. ತಮ್ಮ ಹೆತ್ತವರು ನೀಡುವ ಆಜ್ಞೆಗಳು ಅವರ ಮೇಲಿನ ಪ್ರೀತಿಯುಳ್ಳ ಕಾಳಜಿಯ ನಿಮಿತ್ತದಿಂದಲೇ ಆಗಿರುತ್ತವೆಂಬುದನ್ನು ಮಕ್ಕಳು ತಿಳಿದುಕೊಳ್ಳತಕ್ಕದ್ದು. ತಮ್ಮ ಹೆತ್ತವರು ಆದೇಶಗಳನ್ನು ನೀಡುವದಕ್ಕೆ ಬಹಳ ಇಷ್ಟಪಡುವವರಾಗಿದ್ದಾರೆ ಎಂದು ಯೋಚಿಸಿಕೊಳ್ಳುವ ಬದಲಾಗಿ, ತಮ್ಮ ಹೆತ್ತವರು *ಅವರನ್ನು* ಪ್ರೀತಿಸುತ್ತಾರೆಂಬುದನ್ನು ಮಕ್ಕಳು ತಿಳಿದುಕೊಳ್ಳಬೇಕು.

ಅದೇ ರೀತಿಯಲ್ಲಿಯೇ, ಪ್ರಾಯಸ್ಥರು ಸಹ ಬೇರೆಯವರ ಬಾಯಿಂದ ಕೇವಲ ಟೀಕೆಗಳನ್ನೇ ಕೇಳಿಸಿಕೊಳ್ಳುತ್ತಿದ್ದರೆ, ಅಥವಾ ಬೋಧನೆ ಮಾಡುವವರ ಜೀವಿತಗಳಲ್ಲಿ ಆಜ್ಞೆಗಳಿಗೆ ಮಾದರಿಯು ತೋರಿಸಲ್ಪಡದಿದ್ದರೆ, ಅವರನ್ನು ತಮ್ಮ ಮಿತ್ರರು ಹಾಗೂ ಸಹೋದರರೆಂದು ಕಾಣುವ ಬದಲಾಗಿ ಹುಳುಕು ಹುಡುಕುವವರು ಮತ್ತು ತೀರ್ಪು ಮಾಡುವವರು ಎಂಬದಾಗಿ ಪರಿಗಣಿಸುವ ಸ್ಥಿತಿಗೆ ಬರುವ ಸಾಧ್ಯವಿರುತ್ತದೆ. ಜನರ ಜೀವಿತಗಲ್ಲಿ ಒಳ್ಳೇದನ್ನು ಗುರುತಿಸುವ ಹಾಗೆ ದೇವರ ವಾಕ್ಯವು ನಮಗೆ ಸಹಾಯ ಮಾಡಬಲ್ಲದು.

ಪೌಲನು ಫಿಲಿಪ್ಪಿಯದವರಿಗೆ ಬರೆದ ವೇಳೆ, ಆತನು ಸಹೋದರರನ್ನು ಯಾವಾವದು ಸತ್ಯವೂ ಮಾನ್ಯವೂ ನ್ಯಾಯವೂ ಶುದ್ಧವೂ ಪ್ರೀತಿಕರವೂ ಆಗಿದೆಯೋ, ಯಾವದು ಕೀರ್ತಿಗೆ ಯೋಗ್ಯವೋ ಅದನ್ನೇ ಲಕ್ಷ್ಯಕ್ಕೆ ತಂದುಕೊಳ್ಳಿರಿ ಎಂದು ಪ್ರೋತ್ಸಾಹಿಸಿದನು (ಫಿಲಿಪ್ಪಿ 4:8). ಥೆಸಲೋನಿಕದಲ್ಲಿರುವ ಕ್ರೈಸ್ತರಿಗೆ ತಾನು ಈ ಪತ್ರಿಕೆಯಲ್ಲಿ ಮಾಡಿದ ಸ್ವಬೋಧನೆಯನ್ನೇ ಅನುಸರಿಸುವವನಾಗಿ, ಆತನು ಅವರ ಜೀವಿತಗಳಲ್ಲಿನ ಗುಣಗಳನ್ನು ಶ್ಲಾಘಿಸುತ್ತಾನೆ.

*ಯೇಸುವನ್ನು ಹಿಂಬಾಲಿಸುವದರಲ್ಲಿ ಭವಿಷ್ಯದಲ್ಲಿನ ಬೆಳವಣಿಗೆ.* ನಾವು ಜನರಿಗೆ ಸಹಾಯ ಮಾಡಬಹುದಾದ ಎರಡನೆಯ ದಾರಿಯೆಂದರೆ ಕ್ರಿಸ್ತನಲ್ಲಿ ಭವಿಷ್ಯದ ಪ್ರಗತಿ ಹೊಂದುವದರ ಮೌಲ್ಯವನ್ನು ಒತ್ತಿ ಹೇಳುವದು. ದೇವರು ಲೋಕಕ್ಕಾಗಿ ತಾನು ಹೊಂದಿರುವ ಯೋಜನೆಯಲ್ಲಿ ನಮ್ಮೊಬ್ಬೊಬ್ಬರನ್ನೂ ಉಪಯೋಗಿಸುವದಕ್ಕೆ ಬಯಸುತ್ತಾನೆ.

ನಮ್ಮ ಜೀವಿತಗಳನ್ನು ಮಾರ್ಗದರ್ಶಿಸಲು ಆತನಿಗೆ ನಾವು ಅವಕಾಶವನ್ನು ಕೊಡುವದಾದರೆ ಆತನು ನಮ್ಮನ್ನು ಉಪಯೋಗಿಸುವನು.

ತಮ್ಮ ಉತ್ತಮ ಆರಂಭಗಳ ಮೇಲೆ ಪ್ರಗತಿ ಹೊಂದುವ ಮೂಲಕ ಪರಿಪಕ್ವತೆಯನ್ನು ಸಾಧಿಸುವವರಾಗಿ ಬೆಳೆಯುವಂತೆ ಪ್ರೋತ್ಸಾಹಿಸುವದಕ್ಕೆ ಈ ದಾರಿಯು 1 ಥೆಸಲೋನಿಕದವರಿಗೆ ಬರೆದ ಪತ್ರಿಕೆಯಲ್ಲಿ ಬಳಸಲ್ಪಟ್ಟಿದೆ. 4ನೇ ಅಧ್ಯಾಯವು “ಕಡೇ ಮಾತೇನಂದರೆ” ಎಂಬದಾಗಿ ಆರಂಭಗೊಳ್ಳುತ್ತದೆ, ಇದು ಪತ್ರಿಕೆಯ ಅಂತ್ಯಭಾಗವೆಂಬ ಕಾರಣಕ್ಕಾಗಿ ಅಲ್ಲ, ಆದರೆ ಲೇಖಕನು ಈಗಾಗಲೇ ಸಾಧಿಸಲ್ಪಟ್ಟಿರುವದರ ಮೇಲೆ ಆಧಾರಗೊಳಿಸಿ ಮುಂದಿನ ಬೆಳವಣಿಗೆಗೆ ತನ್ನ ಬೋಧನೆಗಳನ್ನು ಕೂಡಿಸಿ ಬರೆಯುತ್ತಿದ್ದನೆಂಬ ಕಾರಣಕ್ಕಾಗಿಯೇ ಆಗಿತ್ತು (4:1, 10). ಕಡೇ ಎರಡು ಅಧ್ಯಾಯಗಳು ಹೊಸದಾಗಿ ಕ್ರೈಸ್ತರಾಗಿರುವವರಿಗೆ ಪರಿಪಕ್ವತೆಯುಳ್ಳವರಾಗಿ ಬೆಳೆಯುವದಕ್ಕೆ ಸಹಾಯ ಮಾಡುವ ಬೋಧನೆಗಳನ್ನು ನೀಡುತ್ತವೆ.

ನಾವು ನಮ್ಮ ಪಾಪಗಳಿಗೆ ಪಶ್ಚಾತ್ತಾಪ ಪಡಬೇಕು ಮತ್ತು ಶೋಧನೆಗಳು ಹಾಗೂ ಸುಳ್ಳು ಬೋಧನೆಗಳಿಂದ ಬರುವ ಅಪಾಯಗಳನ್ನು ಗ್ರಹಿಸಿಕೊಳ್ಳತಕ್ಕದ್ದು. ಹೇಗೂ, ಕೇವಲ ಪಾಪವನ್ನು ಗುರುತಿಸುವದರಿಂದ ಮತ್ತು ದೂರವಿಡುವದರಿಂದ ಮಾತ್ರವೇ ಕ್ರೈಸ್ತ ಪರಿಪಕ್ವತೆಯನ್ನು ಸಾಧಿಸಲಾಗದು. ಒಳ್ಳೇ ಜನರು ಪಾಪದಿಂದ ದೂರವಿರುವವರಾಗಿಯೂ ಅವರು ತಮ್ಮ ನಾಯಕನಾದ ಯೇಸುವನ್ನು ಹಿಂಬಾಲಿಸುವವರಾಗಿ ತಮ್ಮಲ್ಲಿ ಈಗಾಗಲೇ ಇರುವಂಥ ಒಳ್ಳೇತನದ ಮೇಲೆ ಕಟ್ಟುತ್ತಾ ಸಾಗಿದಂತೆ ನಿಜವಾದ ಬೆಳವಣಿಗೆಯು ಸಂಭವಿಸುವದು. ಜನರನ್ನು ಅವರ ಹಿಂದಿನ ಬೆಳವಣಿಗೆಗಾಗಿ ಶ್ಲಾಘನೆ ಮಾಡಿದ ಬಳಿಕ, ಅವರಿಗೆ ಹೇಗೆ ಬೆಳೆಯಬೇಕೆಂಬುದನ್ನು ತೋರಿಸಿ ಕೊಡುವದಕ್ಕೆ ದೇವರ ವಾಕ್ಯವನ್ನ ಬಳಸುವಂತೆ ನಾವು ಅವರನ್ನು ಬೇಡಿಕೊಳ್ಳಬಹುದು.

ಪ್ರತಿಯೊಬ್ಬ ಕ್ರೈಸ್ತನಲ್ಲಿಯೂ ಬೆಳೆಯುವದಕ್ಕೆ ಸಾಮರ್ಥ್ಯವಿರುತ್ತದೆ. ಅನೇಕ ಸಂದರ್ಭಗಳಲ್ಲಿ, ಜನರು ಬೆಳೆಯುವದಕ್ಕಾಗಿ ಪ್ರಯತ್ನವನ್ನು ಸಹ ಮಾಡದವರಾಗಿರುತ್ತಾರೆ; ತಾವು ಬೆಳೆಯಬೇಕಾದ ಅಗತ್ಯವಿಲ್ಲ ಅಥವಾ ಬೆಳೆಯುವದಕ್ಕೆ ಸಾಧ್ಯವಿಲ್ಲ ಎಂಬ ನಿರ್ಣಯಕ್ಕೆ ಬಂದವರಾಗಿರುತ್ತಾರೆ. ಬೋಧಕರು ಬೇರೆಯವರ ಕಡೆಗೆ ಈ ರೀತಿಯ ಮನೋಭಾವವನ್ನು ಹೊಂದಿರುವ ದೋಷಕ್ಕೆ ಒಳಗಾಗಿರಬಹುದಾಗಿದೆ. ನಾವು ನಮ್ಮ ವಿದ್ಯಾರ್ಥಿಗಳ ಕಡೆಗೆ ಈ ರೀತಿಯಾದ ಮನೋಭಾವಗಳನ್ನು ಹೊಂದಿರುವಾದದಲ್ಲಿ, ಪರಿಪಕ್ವತೆ ಕಡೆಗೆ ಕಾರ್ಯಸಾಧಿಸುವ ವಿಷಯದಲ್ಲಿ ಅವರಿಗೆ ನಾವು ಸಹಾಯ ಮಾಡುವದು ಅಸಂಭವನೀಯವಾಗುತ್ತದೆ.

ಫಿಲಿಪ್ಪಿಯಲ್ಲಿರುವ ಕ್ರೈಸ್ತರಿಗೆ ಬರೆದ ತನ್ನ ಪತ್ರಿಕೆಯಲ್ಲಿ, ಪೌಲನು ಹೀಗೆ ಬರೆಯುತ್ತಾನೆ, “ಈ ಒಳ್ಳೇ ಕೆಲಸವನ್ನು ನಿಮ್ಮಲ್ಲಿ ಪ್ರಾರಂಭಿಸಿದಾತನು ಅದನ್ನು ನಡಿಸಿಕೊಂಡು ಯೇಸು ಕ್ರಿಸ್ತನು ಬರುವ ದಿನಗಳೊಳಗೆ ಸಿದ್ಧಿಗೆ ತರುವನೆಂದು ನನಗೆ ಭರವಸವುಂಟು.” (ಫಿಲಿಪ್ಪಿ 1:6). ಅದೇ ರೀತಿಯಲ್ಲಿಯೇ, ಆತನು ಥೆಸಲೋನಿಕದವರ ಪ್ರಗತಿಯ ನಿಮಿತ್ತವಾಗಿ ನಾಲ್ಕು ಸಾರಿ ಕೃತಜ್ಞತಾಸ್ತುತಿ ಅರ್ಪಿಸುತ್ತಾನೆ ಮತ್ತು ಅವರನ್ನು “ಅತ್ಯಧಿಕವಾಗುವಂತೆ,” “ಹೆಚ್ಚಾಗಿ ನಡೆಯಬೇಕೆಂದು,” “ಇನ್ನೂ ಹೆಚ್ಚುತ್ತಾ,” ಮತ್ತು “ವೃದ್ಧಿಪಡಿಸುತ್ತಾ ಇರಿ” ಎಂದು

ಪ್ರೋತ್ಸಾಹಿಸುತ್ತಾನೆ (3:12; 4:1, 10; 5:11). ನಾವು ಜೊತೆಯ ಕ್ರೈಸ್ತರಲ್ಲಿರುವ ಸಾಮರ್ಥ್ಯದಲ್ಲಿ ಅದೇ ರೀತಿಯ ಭರವಸೆಯನ್ನು ವ್ಯಕ್ತಪಡಿಸತಕ್ಕದ್ದು.

ದೇವರು ನಮ್ಮೊಬ್ಬೊಬ್ಬರಿಗಾಗಿಯೂ ಯೋಜನೆಗಳನ್ನು ಹೊಂದಿದ್ದಾನೆ. ಇದಕ್ಕೆ ಹೊಸ ಒಡಂಬಡಿಕೆಯ ಪತ್ರಿಕೆಗಳು ಪುರಾವೆ ಆಗಿರುತ್ತವೆ. ಈ ಪತ್ರಿಕೆಗಳು ನಮ್ಮೆಲ್ಲರಿಗೂ ಬೆಳೆಯುವಂತೆ ಸಹಾಯ ಮಾಡಬಲ್ಲವು. ನಾವು ಇತರರಿಗೆ ಅವರು ಕ್ರೈಸ್ತತ್ವದಲ್ಲಿ ಮಾಡಿರುವ ಉತ್ತಮ ಆರಂಭದ ಮೌಲ್ಯವೇನೆಂಬುದನ್ನು ತೋರಿಸಿ ಕೊಟ್ಟಾದ ಮೇಲೆ, ಬೆಳೆಯುವದಕ್ಕೆ ಸಂಭಾವ್ಯತೆಯನ್ನು ಹೊಂದಿರುವ ಇತರ ಕ್ಷೇತ್ರಗಳನ್ನು ಕಂಡುಕೊಳ್ಳುವದಕ್ಕೆ ಅವರೊಂದಿಗೆ ನಿಕಟವಾಗಿ ಕೆಲಸ ಮಾಡಬೇಕು.

*ಮುಕ್ತಾಯ.* ನಾವು ಕೆಲವು ಕ್ರೈಸ್ತರಲ್ಲಿ ಪಾಪವನ್ನು ಕಾಣಬಹುದೆಂಬ ಕಾರಣಕ್ಕೆ ಅವರನ್ನು ಆಶಾರಹಿತರೆಂದು ಕಾಣುವದಾದರೆ, ಅವರ ಜೀವಿತಗಳಲ್ಲಿನ ಒಳ್ಳೇ ಕೃತ್ಯಗಳನ್ನು ಶ್ಲಾಘಿಸುವದಕ್ಕೆ ಅಸಡ್ಡೆ ಮಾಡುವದಾದರೆ, ಅಪಕ್ವತೆಯುಳ್ಳಯುವರು ಮಾತ್ರವೇ ಪ್ರಗತಿಯನ್ನು ಸಾಧಿಸಬಲ್ಲರೆಂದು ನಾವು ಭಾವಿಸುವದಾದರೆ, 1 ಥೆಸಲೋನಿಕದವರಿಗೆ ಬರೆದ ಪತ್ರಿಕೆಯು ಅನುಸರಿಸುವ ದಾರಿಯನ್ನು ಗಮನಕ್ಕೆ ತೆಗೆದುಕೊಳ್ಳುವ ಮೂಲಕ ನಾವು ಸಹಾಯವನ್ನು ಪಡೆದುಕೊಳ್ಳಬಹುದು.

ಥೆಸಲೋನಿಕದವರು ತಮ್ಮ ನಾಯಕನನ್ನು-ಯೇಸುವನ್ನು-ಹಿಂಬಾಲಿಸುವದರಲ್ಲಿ ಒಂದು ಉತ್ತಮ ಕೆಲಸವನ್ನು ಮಾಡಿದ್ದರು. ನಮ್ಮ ವಿಷಯವೇನು? ಆತನನ್ನು ಹಿಂಬಾಲಿಸಬೇಕೆಂಬುದು, ಬೇರೆ ಎಲ್ಲರ ಮಾತುಗಳಿಗಿಂತಲೂ ಆತನ ಸಲಹೆಯನ್ನು ಹೆಚ್ಚು ಮೌಲ್ಯವೆಂದೆಣಿಸುವದಕ್ಕೆ, ಆತನನ್ನು ನಮ್ಮ ಅನುದಿನದ ಮಾದರಿಯಾಗಿ ಬಳಸಿಕೊಳ್ಳುವದು ನಮ್ಮ ಇಂಗಿತವೋ? ತಮ್ಮ ಬೋಧಕರು ಯೇಸುವಿನ ಮನೋಭಾವಗಳನ್ನು ಮತ್ತು ಕ್ರಿಯೆಗಳನ್ನು ತೋರ್ಪಡಿಸಿದರೆಂಬುದನ್ನು ಥೆಸಲೋನಿಕದವರು ಕಂಡರು. ಇದರಿಂದಾಗಿ ತಮ್ಮ ಯಜಮಾನನನ್ನು ಹೇಗೆ ಹಿಂಬಾಲಿಸಬೇಕೆಂದನ್ನು ಕಲಿಯುವದು ಅವರಿಗೆ ಇನ್ನಷ್ಟು ಸುಲಭವಾಗಿತ್ತು. ನಾವು ಒಳ್ಳೇ ಮಾದರಿಗಳನ್ನು ಹುಡುಕುತ್ತಿದ್ದೇವೋ, ಅವುಗಳನ್ನು ಶ್ಲಾಘಿಸುತ್ತಿದ್ದೇವೋ, ಮತ್ತು ಅವುಗಳನ್ನು ನೋಡುವ ಮೂಲಕ ಅವುಗಳಂತೆ ಹೇಗೆ ಜೀವಿಸಬೇಕೆಂಬುದನ್ನು ಕಲಿಯುತ್ತಿದ್ದೇವೋ? ನಮ್ಮ ನಾಯಕನ ಜೀವಿತವು ಹೇಗೆ ಬೇರೆಯವರಿಂದ ತೋರ್ಪಡಿಸಲ್ಪಡುತ್ತಿರುವ ರೀತಿಗಳನ್ನು ನೋಡುವವರಾಗಿ ಒಂದು ಕಾರ್ಯರೂಪದ ದಾರಿಯಲ್ಲಿ ನಮ್ಮ ನಾಯಕನನ್ನು ಹಿಂಬಾಲಿಸಬೇಕೆಂದು ನಿರ್ಧಾರ ಮಾಡಿಕೊಂಡಿದ್ದೇವೋ? ನಾವು ಬೇರೆಯವರಿಗೆ ಯೇಸುವು ಮಾಡಬಹುದಾದ ಒಳ್ಳೇ ಕೃತ್ಯಗಳ ಒಂದು ಮಾದರಿಯನ್ನು ಬಿಟ್ಟು ಹೋಗುವದಕ್ಕೆ ಪ್ರಯತ್ನಿಸುತ್ತಿದ್ದೇವೋ? ನಾವು ಸಹ ಪೌಲನು ಹೇಳಿದಂತೆ ಹೀಗೆ ಹೇಳಬಲ್ಲೆವೋ "ನಾನು ಕ್ರಿಸ್ತನನ್ನು ಅನುಸರಿಸುವಂತೆಯೇ ನೀವು ನನ್ನನ್ನು ಅನುಸರಿಸುವವರಾಗಿರಿ" (1 ಕೊರಿಂಥ 11:1)? ಆತನು ಹೀಗೆ ಹೇಳಿದನು, "ನೀವು ಯಾವದನ್ನು ನನ್ನಿಂದ ಕಲಿತು ಹೊಂದಿದಿರೋ ಮತ್ತು ಯಾವದನ್ನು ನನ್ನಲ್ಲಿ ಕೇಳಿ ಕಂಡಿರೋ ಅದನ್ನೇ ಮಾಡುತ್ತಾ ಬನ್ನಿರಿ. ಹೀಗೆ ಮಾಡಿದರೆ ಶಾಂತಿದಾಯಕನಾದ ದೇವರು ನಿಮ್ಮೊಂದಿಗಿರುವನು" (ಫಿಲಿಪ್ಪಿ 4:9). ನಾವು ಇದನ್ನು ಹೇಳುವವರಾಗುವ

ರೀತಿಯಲ್ಲಿ ಜೀವಿಸೋಣ!

ನಮ್ಮ ನಾಯಕನನ್ನು ಅನುಸರಿಸುವದರ ಫಲಿತವೇನಾಗಿರುತ್ತದೆ? ಆತನೊಂದಿಗೆ ಪರಲೋಕದಲ್ಲಿರುವದು. 1 ಥೆಸಲೋನಿಕದವರಿಗೆ ಬರೆದ ಪತ್ರಿಕೆಯುದ್ದಕ್ಕೂ ಹರಿಯುವ ಚರ್ಚೆಯಾಂಶವೆಂದರೆ ಯೇಸುವಿನ ಪುನರಾಗಮನ. ಅದು ಪ್ರತಿಯೊಂದು ಅಧ್ಯಾಯದಲ್ಲಿಯೂ ಪ್ರಸ್ತಾಪಿಸಲ್ಪಟ್ಟಿದೆ (1:10; 2:19; 3:13; 4:14-17; 5:1-3, 23). ಥೆಸಲೋನಿಕದವರಿಗೆ ಯೇಸುವಿನ ಪುನರಾಗಮನದ ಬಗ್ಗೆ ಗೊತ್ತಿರಲಿಲ್ಲವೆಂಬಕ್ಕಾಗಲಿ ಅಥವಾ ಅವರ ಜೀವಿತಗಳನ್ನು ಬದಲಾಯಿಸಿಕೊಳ್ಳುವ ಹಾಗೆ ಅವರನ್ನು ಹೆದರಿಸುವದಕ್ಕಾಗಲಿ ಯೇಸುವಿನ ಪುನರಾಗಮನದ ಕುರಿತು ಅಷ್ಟೊಂದು ವಿಸ್ತಾರವಾದ ಗಮನವು ಕೊಡಲ್ಪಟ್ಟಿರುವದಿಲ್ಲ. ಈ ಒತ್ತು ಕೊಡುವದಕ್ಕೆ ಮುಖ್ಯ ಕಾರಣವೇನೆಂದರೆ ಜೀವನದ ಕುರಿತಾದ ಒಂದು ಸಕಾರಾತ್ಮಕವಾದ ಹಾಗೂ ಪರಿಪಕ್ವವಾದ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬೇಕೆಂಬುದೇ. ಅವರು ಯೇಸುವಿನಂತಾಗಲು ಬಯಸುವವರು ಮತ್ತು ಯೇಸುವಿನ ಸಂಗಡ ಇರುವದನ್ನು ಎದುರು ನೋಡುವವರು ಆಗಿದ್ದರು.

ಥೆಸಲೋನಿಕದವರು ಕ್ರಿಸ್ತನಲ್ಲಿನ ತಮ್ಮ ನೂತನ ಜೀವಿಗಳಲ್ಲಿ ಒಂದು ಶ್ರೇಷ್ಠವಾದ ಆರಂಭವನ್ನು ಮಾಡಿದ್ದರು. ಅವರು ಪರಿಪಕ್ವಗೊಳ್ಳುವವರಾಗಿ ಮುನ್ನಡೆಯಬಹುದಿತ್ತು. ಪರಾಕಾಷ್ಠೆಯು ಅವರ ಕರ್ತನ ಸನ್ನಿಧಿಯಲ್ಲಿ ನಿತ್ಯಕಾಲಕ್ಕೂ ಇರುವದೇ ಆಗಿತ್ತು!

ಯೇಸುವಿನ ಪುನರಾಗಮನ ಕುರಿತು ಆಗಾಗ್ಗೆ ನೆನಪಿಸಿಕೊಳ್ಳುವದು ನಿರೀಕ್ಷೆಗೆ ಒಂದು ಮೂಲವಾಗಿತ್ತು. ಒಂದು ದೋಷದಿಂದ ಕೂಡಿದ ಲೋಕದಲ್ಲಿ, ಕ್ರೈಸ್ತರು ಎಂದಿಗೂ ನಿರಾತಂಕವಾಗಿರುವದಕ್ಕಾಗದು. ನಾವು ಪುನರುತ್ಥಾನಗೊಂಡಿರುವ ಯೇಸುವಿನಲ್ಲಿ ನಂಬಿಕೆಯಿಟ್ಟಿರುವದರ ಅರ್ಥವು ಆತನ ಪುನರಾಗಮನವನ್ನು, ಆತನನ್ನು ಮತ್ತು ಆತನನ್ನು ಹಿಂಬಾಲಿಸಿದವರನ್ನು ಪುನಃ ಕೂಡಿಕೊಳ್ಳುವದನ್ನು ಎದುರು ನೋಡಬಲ್ಲೆವು ಎಂದಾಗಿರುತ್ತದೆ. ಇದು ಮರಣಿಸಿದವರ ವಿಷಯದಲ್ಲಿ ಸತ್ಯವಾಗಿರುತ್ತದೆ, ಅದೇ ರೀತಿಯಲ್ಲಿ ಇನ್ನೂ ಬದುಕಿರುವವರ ವಿಷಯದಲ್ಲಿಯೂ ಅಷ್ಟೇ ಖಚಿತವಾದದ್ದಾಗಿರುತ್ತದೆ. ಹಾಗಾದರೆ ಜೀವನವು ಅಂತ್ಯಗೊಳ್ಳುವದು, ನಿಜಕ್ಕೂ ಮರಣವಲ್ಲ-ಹಾಗಿದ್ದರೂ ಯೇಸುವಿನ ಪುನರಾಗಮನದ ಮುಂಚೆ ಅನೇಕರು ಮರಣಿಸುವರು. 1 ಥೆಸಲೋನಿಕದವರಿಗೆ ಬರೆದ ಪತ್ರಿಕೆಯು ಈಗ ಆರಂಭಗೊಳ್ಳುವ ಮತ್ತು ಯೇಸುವು ಹಿಂದಿರುಗಿ ಬರುವ ವೇಳೆ ಆತನೊಂದಿಗೆ ನಿತ್ಯತ್ವದಲ್ಲಿ ಆನಂದಿಸುವಂಥ ನಿತ್ಯಜೀವದ ಮೇಲೆ ಮುಖ್ಯ ಒತ್ತು ಹೊಂದಿರುತ್ತದೆ. ನಾವು ನಮ್ಮ ನಾಯಕನನ್ನು ಈ ಜೀವಿತದ ಮೂಲಕವಾಗಿ ಮುಂದಿನ ಜೀವನದೊಳಗೆ ಸಾಗುವ ತನಕ ಅನುಸರಿಸಬೇಕು! ಕ್ರೈಸ್ತನ ಶ್ರೇಷ್ಠ ನಿರೀಕ್ಷೆಯೆಂದರೆ ಯೇಸುವನ್ನು ಹಿಂಬಾಲಿಸಿ ಮಹಿಮೆಯಲ್ಲಿ ಸೇರುವದೇ ಆಗಿದೆ! TP

---

**ಅಡಿಟಿಪ್ಪಣಿಗಳು**

[1]Clement of Rome *1 Clement* 38.4. [2]Ignatius *Epistle to the Ephesians* 10.1. [3]Irenaeus *Against Heresies* 5.6.1. [4]F. F. Bruce, *Paul: Apostle of the Heart Set Free* (Grand Rapids, Mich.: Wm. B. Eerdmans Publishing Co., 1977), 43; and Everett Ferguson, *Backgrounds of*

*Early Christianity*, 2d ed. (Grand Rapids, Mich.: Wm. B. Eerdmans Publishing Co., 1993), 102–3. [5]Ferguson, 103. Tos. Qiddushin 1:11 ದಲ್ಲಿ ರಬ್ಬಾನಿಕ್ ವ್ಯಾಖ್ಯೆಗಳನ್ನು ಸಹ ನೋಡಿರಿ. [6]Donald H. Madvig, "Thessalonica," in *The International Standard Bible Encyclopaedia*, ed. Geoffrey W. Bromiley (Grand Rapids, Mich.: Wm. B. Eerdmans Publishing Co., 1988), 4:837. [7]Robert L. Thomas, "1 Thessalonians," in *The Expositor's Bible Commentary*, ed. Frank E. Gaebelein (Grand Rapids, Mich.: Zondervan, 1978), 11:230. [8]Raymond C. Kelcy, *The Letters of Paul to the Thessalonians*, The Living Word Commentary, vol. 13 (Austin, Tex.: R. B. Sweet Co., 1968), 18–19 ರಿಂದ ಆಯ್ದುಕೊಳ್ಳಲ್ಪಟ್ಟಿದ್ದು.




## ಪೌಲನ ಎರಡನೆಯ ಸುವಾರ್ತಾ ಪ್ರಯಾಣ